ಕರ್ನಾಟಕ ಸರ್ಕಾರ Government of Karnataka

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು

Raichur Institute Of Medical Sciences, Raichur

(ಸರ್ಕಾರದ ಸ್ವಾಯತ್ತ ಸಂಸ್ಥೆ) (Govt. Autonomous Institution)

ಹೈದ್ರಾಬಾದ್ ರೋಡ್, ರಾಯಚೂರು -584102 Hydrabad Road, Raichur -584102

Web. www.rims-raichur.com Phone/Fax-08532-238488/89 Email: info@rims-raichur.com

**ದಿನಾಂಕ 17.12.2018 ರಂದು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ಇವರ ಅಧ್ಯಕ್ಷತೆಯಲ್ಲಿ ಸುವರ್ಣ ಸೌಧ, ಬೆಳಗಾವಿಯಲ್ಲಿ ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 15ನೇ ಹಣಕಾಸು ಸಮಿತಿ ಸಭೆಯ ಸಭಾ ನಡುವಳಿಗಳು**

**ಸಭೆಯಲ್ಲಿ ಹಾಜರಿದ್ದ ಸದಸ್ಯರು**

1. ಶ್ರೀ. ಜಾವೇದ್ ಅಖ್ತರ್, ಭಾ.ಆ.ಸೇ : ಅಧ್ಯಕ್ಷರು
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈ.ಶಿ), ಬೆಂಗಳೂರು

2 . ಶ್ರೀ ಚಂದ್ರಶೇಖರ್, : ವಿಶೇಷ ಆಹ್ವಾನಿತರು
ಸರ್ಕಾರದ ಉಪ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈ.ಶಿ),
ಬೆಂಗಳೂರು

3. ಡಾ. ಪಿ.ಜಿ. ಗಿರೀಶ್, : ಸದಸ್ಯರು
ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು

4. ಡಾ. ಕವಿತಾ ಪಾಟೀಲ್, : ಸದಸ್ಯರು
ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು

5. ಡಾ. ರಮೇಶ್. ಬಿ.ಹೆಚ್, : ಸದಸ್ಯರು
ವೈದ್ಯಕೀಯ ಅಧೀಕ್ಷಕರು, ರಿಮ್ಸ್ ಬೋಧಕ ಆಸ್ಪತ್ರೆ, ರಾಯಚೂರು

6. ಡಾ. ವಿಜಯಶಂಕರ್, : ಸದಸ್ಯರು
ಜಿಲ್ಲಾ ಶಸ್ತ್ರಚಿಕಿತ್ಸಕರು, ರಿಮ್ಸ್ ಬೋಧಕ ಆಸ್ಪತ್ರೆ, ರಾಯಚೂರು

ಅಧ್ಯಕ್ಷರು, ರಿಮ್ಸ್ ಆರ್ಥಿಕ ಸಮಿತಿ ಸಭೆ ಇವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

| | |
|---|---|
| (ಡಾ.ಕವಿತಾ ಪಾಟೀಲ್), | (ಜಾವೇದ್ ಅಖ್ತರ್), ಭಾ.ಆ.ಸೇ, |
| ನಿರ್ದೇಶಕರು, | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, |
| ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, |
| ರಾಯಚೂರು | ಬೆಂಗಳೂರು |

| ವಿಷಯ ಸೂಚಿ ಸಂಖ್ಯೆ – 01 : | ದಿನಾಂಕ 13.11.2018 ರಂದು ಜರುಗಿದ ರಿಮ್ಸ್ ಸಂಸ್ಥೆಯ 14ನೇ ಹಣಕಾಸು ಸಮಿತಿ ಸಭೆಯ ಸಭಾ ನಡಾವಳಿಗಳನ್ನು ಓದಿ ದಾಖಲಿಸುವ ಬಗ್ಗೆ. |
|---|---|

ದಿನಾಂಕ 13.11.2018 ರಂದು ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 14ನೇ ಹಣಕಾಸು ಸಮಿತಿ ಸಭೆಯ ಅನುಪಾಲನಾ ವರದಿಯನ್ನು ಆರ್ಥಿಕ ಸಮಿತಿ ಸಭೆಯ ಅನುಮೋದನೆಗೆ ಸಲ್ಲಿಸಿದೆ.

<u>ಸಭೆಯ ತೀರ್ಮಾನ :-</u>

ದಿನಾಂಕ 13.11.2018 ರಂದು ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 14ನೇ ಹಣಕಾಸು ಸಮಿತಿ ಸಭೆಯು ಇತ್ತೀಚೆಗಷ್ಟೇ ಜರುಗಿಸಿರುವುದರಿಂದ, 14ನೇ ಆರ್ಥಿಕ ಸಮಿತಿ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಅನುಷ್ಠಾನಗೊಳಿಸಲು ಸಮಯಾವಕಾಶದ ಅವಶ್ಯಕತೆಯಿರುತ್ತದೆ. ಈ ಹಿನ್ನಲೆಯಲ್ಲಿ 14ನೇ ಆರ್ಥಿಕ ಸಮಿತಿ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಜಾರಿಗೊಳಿಸಿದ ನಂತರ ಅನುಪಾಲನ ವರದಿಯನ್ನು ಮುಂದಿನ ಆರ್ಥಿಕ ಸಮಿತಿ ಸಭೆಯಲ್ಲಿ ಅನುಮೋದನೆಗೆ ಮಂಡಿಸುವಂತೆ ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು.

| ವಿಷಯ ಸೂಚಿ ಸಂಖ್ಯೆ – 02 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವಿವಿಧ ಲೆಕ್ಕ ಶಿರ್ಷಿಕೆ / ಖಾತೆಗಳ ಮಾಹಿತಿಯನ್ನು ಸಲ್ಲಿಸುವ ಬಗ್ಗೆ. |
|---|---|

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ವಿವಿಧ ಲೆಕ್ಕ ಶಿರ್ಷಿಕೆ ಅಡಿಯಲ್ಲಿ ಸರ್ಕಾರದಿಂದ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ. ಸರ್ಕಾರದ ಸುತ್ತೋಲೆ ಸಂಖ್ಯೆ ಆಕುಕ / 15 / ಎಂಎಸ್‌ಎಫ್ / 2018 ದಿನಾಂಕ 10.01.2018 ರನ್ವಯ ಜರುಗುವ ಆರ್ಥಿಕ ಸಮಿತಿ ಹಾಗೂ ಆಡಳಿತ ಮಂಡಳಿ ಸಭೆಗಳಲ್ಲಿ ಬ್ಯಾಂಕ್ ಖಾತೆಗಳ ವಿವರಗಳನ್ನು ಮಂಡಿಸುವಂತೆ ಸೂಚಿಸಲಾಗಿರುತ್ತದೆ. ಈ ಹಿನ್ನಲೆಯಲ್ಲಿ ರಿಮ್ಸ್ ಸಂಸ್ಥೆಯ ಲೆಕ್ಕ ಶಿರ್ಷಿಕೆ / ಖಾತೆಗಳಲ್ಲಿ ದಿನಾಂಕ 06.11.2018 ಕ್ಕೆ ಬಡ್ಡಿ ಸೇರಿ ಲಭ್ಯವಿರುವ ಅನುದಾನದ ಮಾಹಿತಿ ಈ ಕೆಳಗಿನಂತಿರುತ್ತದೆ. ಸದರಿ ಲಭ್ಯವಿರುವ ಅನುದಾನಕ್ಕೆ ಆಸ್ಪತ್ರೆಯ ಆವರಣಕ್ಕೆ ಪೆನ್ಸಿಂಗ್ ನಿರ್ಮಾಣ, ಸಂಸ್ಥೆಯ ಕಟ್ಟಡಗಳಿಗೆ ಪ್ಲಂಬಿಂಗ್ ಕಾರ್ಯಗಳನ್ನು ಕೈಗೊಳ್ಳಲು ದಿನಾಂಕ 13.11.2018 ರಂದು ಜರುಗಿದ ರಿಮ್ಸ್ ಸಂಸ್ಥೆಯ ಆರ್ಥಿಕ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆಯಲಾಗಿರುತ್ತದೆ.

1) ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಲೆಕ್ಕ ಶಿರ್ಷಿಕೆ / ಖಾತೆಗಳ ವಿವರ

| Sl.No | Particulars | Account No. | Head of Account | Balance as on 06.11.2018 |
|---|---|---|---|---|
| 1 | Salary & OE | 62013028147 | 2210-05-105-1-54-101<br>2210-05-105-1-54-102<br>2210-05-105-1-54-103<br>2210-05-105-1-54-115 | 71,91,691/- |
| 2 | Civil Account | 62006895732 | 4210-03-10-1-02-386 | 19,81,31,595/- |

(ಡಾ.ಕವಿತಾ ಪಾಟೀಲ್),
ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಜಾವೇದ್ ಅಖ್ತರ್), ಭಾ.ಆ.ಸೇ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ,
ಬೆಂಗಳೂರು

| | | | | |
|---|---|---|---|---|
| 3 | SCP & STP Sub Plan Account | 62385751344 | 2210-05-105-1-54-422<br>2210-05-105-1-54-423<br>2210-01-110-2-37-422<br>2210-01-110-2-37-423<br>4210-03-10-1-02-422<br>4210-03-10-1-02-423 | 2,68,82,661/- |
| 4 | Equipment Account | 62094697678 | 4210-03-10-1-02-386 | 2,12,18,113/- |
| 5 | Building Maintenance | 62129977456 | | 4,35,55,412/- |
| 6 | EMD & RTI Account | 62003442491 | | 1,46,65,632/- |
| 7 | Tuition Fee Account | 62036768833 | | 3,73,97,664/- |
| 8 | Hostel Fee Account | 62036768877 | | 3,84,45,356/- |
| 9 | Para Medical Account | 62058752431 | | 9,71,147/- |
| 10 | Sports & Cultural Activity | 62282083154 | | 8,20,953/- |
| 11 | RIMS Donation Account | 62429576941 | | 4,26,476/- |
| 12 | RIMS Blood Bank | 62510122360 | | 37,32,990/- |
| 13 | User Charges | 62334775412 | | 4,14,51,572/- |

2) ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಲೆಕ್ಕ ಶಿರ್ಷಿಕೆ / ಖಾತೆಗಳ ವಿವರ

| Sl.No | Particulars | Account No. | Head of Account | B.as on 06.11.2018 |
|---|---|---|---|---|
| 1 | Miscellaneous Account | 62248955822 | 2210-01-110-2-37-101<br>2210-01-110-2-37-102<br>2210-01-110-2-37-103<br>2210-01-110-2-37-115 | 37,06,57,162/- |
| 2 | OPEC Hospital User Charges | 62458061212 | | 1,48,68,953/- |
| 3 | SAST / ARK Receipts (Arogya Raksha Karnataka ) | 62458060569 | | 92,12,719/- |

**ಸಭೆಯ ತೀರ್ಮಾನ :-**

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿನ ವಿವಿಧ ಖಾತೆಗಳಲ್ಲಿ ಲಭ್ಯವಿರುವ ಅನುದಾನದ ಕುರಿತು ಆರ್ಥಿಕ ಸಮಿತಿ ಸಭೆಯು ಪರಿಶೀಲಿಸಲಾಯಿತು. ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಉಪಯೋಜನೆ ಅಡಿಯಲ್ಲಿ ಅನುದಾನ ಸಮರ್ಪಕವಾಗಿ ಬಳಕೆಯಾಗಿಲ್ಲವಾದ್ದರಿಂದ ಅದನ್ನು ಅದೇ ಯೋಜನೆಗೆ ಮಾರ್ಚ್ – 2019ರ ವೇಳಗೆ ಸದ್ಬಳಕೆ ಮಾಡಲು ಕ್ರಮವಹಿಸುವಂತೆ ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು.

| | |
|---|---|
| (ಡಾ.ಕವಿತಾ ಪಾಟೀಲ್), | (ಜಾವೇದ್ ಅಖ್ತರ್), ಭಾ.ಆ.ಸೇ, |
| ನಿರ್ದೇಶಕರು, | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, |
| ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, |
| ರಾಯಚೂರು | ಬೆಂಗಳೂರು |

| ವಿಷಯ ಸೂಚಿ ಸಂಖ್ಯೆ – 03 | ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಎಂ.ಆರ್.ಐ ಕೊಠಡಿಗೆ ನಿರಂತರ ವಿದ್ಯುತ್ ಸರಬರಾಜು ಸಂಬಂಧ ಅವಶ್ಯವಿರುವ 300 ಕೆವಿ ಟ್ರಾನ್ಸ್‌ಫಾರ್ಮರ್ ಹಾಗೂ 300 ಜನರೇಟರ್ ಖರೀದಿಸಲು ಅನುಮತಿ ನೀಡುವ ಕುರಿತು. |
|---|---|

ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹೆಚ್ಚಿನ ಚಿಕಿತ್ಸೆಯನ್ನು ನೀಡುವ ಸಂಬಂಧ ಎಂ.ಆರ್.ಐ ಉಪಕರಣವನ್ನು ಸರ್ಕಾರದಿಂದ ಪೂರೈಸಲಾಗಿದ್ದು, ಎಂ.ಆರ್.ಐ ಉಪಕರಣಕ್ಕೆ ಅವಶ್ಯವಿರುವ 160 ಕೆವಿಎ ಹೆಚ್ಚುವರಿ ವಿದ್ಯುತ್‌ನ್ನು ಈಗಾಗಲೇ ವಿದ್ಯುತ್ ಇಲಾಖೆಯಿಂದ ಮಂಜೂರು ಮಾಡಲಾಗಿರುತ್ತದೆ. ಹಾಗೂ ಎಂ.ಆರ್.ಐ ಉಪಕರಣವನ್ನು ಚಾಲನೆಗೊಳಿಸಲು ಅವಶ್ಯವಿರುವ ಎಲ್ಲಾ ಕ್ರಮಗಳನ್ನು ಈಗಾಗಲೇ ಕೈಗೊಳ್ಳಲಾಗಿರುತ್ತದೆ. ಎಂ.ಆರ್.ಐ ಉಪಕರಣದ ಸುರಕ್ಷತೆಯ ಹಿತದೃಷ್ಟಿಯಿಂದ ಎಂ.ಆರ್.ಐ ಉಪಕರಣಕ್ಕೆ ಯಾವುದೇ ಅಡೆತಡೆಯಿಲ್ಲದೇ ನಿರಂತರ ವಿದ್ಯುತ್‌ನ್ನು ಸರಬರಾಜನ್ನು ಮಾಡುವ ಸಂಬಂಧ 300 ಕೆವಿಎ ಸಾಮಾರ್ಥ್ಯದ ನೂತನ ಟ್ರಾನ್ಸ್‌ಫಾರ್ಮರ್ ಹಾಗು ಜನರೇಟರ್‌ನ್ನು ಅವಶ್ಯಕತೆಯಿರುತ್ತದೆಯೆಂದು ವೈದ್ಯಕೀಯ ಅಧೀಕ್ಷಕರು, ರಿಮ್ಸ್ ಬೋದಕ ಆಸ್ಪತ್ರೆ, ರಾಯಚೂರು ಇವರು ದಿನಾಂಕ 30.11.2018 ರಂದು ಕೋರಿರುತ್ತಾರೆ.

ಎಂ.ಆರ್.ಐ ಉಪಕರಣಕ್ಕೆ ಪ್ರತ್ಯೇಕ 300 ಕೆವಿಎ ಜನರೇಟರ್ ಹಾಗೂ 300 ಕೆವಿಎ ಟ್ರಾನ್ಸ್‌ಫಾರ್ಮರ್‌ನ್ನು ಅಳವಡಿಸುವ ಸಂಬಂಧ ಅವಶ್ಯವಿರುವ ಅಂದಾಜು ಪಟ್ಟಿಯನ್ನು ಸಲ್ಲಿಸುವಂತೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ಉಪವಿಭಾಗ, ರಾಯಚೂರು ಇವರನ್ನು ಈ ಕಾರ್ಯಾಲಯದ ಪತ್ರ ಸಂಖ್ಯೆ. ರಿಮ್ಸ್ / ಸಾಮಾನ್ಯ / ಅಭಿವೃದ್ಧಿ / 2018-19 / 198 ದಿನಾಂಕ 29.11.2018 ರ ಪತ್ರದಲ್ಲಿ ಕೋರಲಾಗಿರುತ್ತದೆ. ಸದರಿಯವರು ಎಂ.ಆರ್.ಐ ಉಪಕರಣಕ್ಕೆ ಪ್ರತ್ಯೇಕ 300 ಕೆವಿಎ ಜನರೇಟರ್ ಹಾಗೂ 300 ಕೆವಿಎ ಟ್ರಾನ್ಸ್‌ಫಾರ್ಮರ್‌ನ್ನು ಅಳವಡಿಸುವ ಸಂಬಂಧ ರೂ. 60.00 ಲಕ್ಷಗಳ ಅಂದಾಜು ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಸದರಿ ನೂತನ ಟ್ರಾನ್ಸ್‌ಫಾರ್ಮರ್ ಹಾಗೂ ಜನರೇಟರ್‌ನ್ನು ಖರೀದಿಸಲು ರಿಮ್ಸ್ ಸಂಸ್ಥೆಯ ನಿರ್ವಹಣಾ ಖಾತೆ ಸಂಖ್ಯೆ. 62129977456 ರಲ್ಲಿ ಅನುದಾನ ಲಭ್ಯವಿರುತ್ತದೆ.

ಕಾರಣ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಎಂ.ಆರ್.ಐ ಉಪಕರಣದ ಸುರಕ್ಷತೆಯ ಹಿತ ದೃಷ್ಟಿಯಿಂದ ಎಂ.ಆರ್.ಐ ಉಪಕರಣಕ್ಕೆ ಪ್ರತ್ಯೇಕ 300 ಕೆವಿಎ ಜನರೇಟರ್ ಹಾಗೂ 300 ಕೆವಿಎ ಟ್ರಾನ್ಸ್‌ಫಾರ್ಮರ್‌ನ್ನು ಅಳವಡಿಸಲು ಸಲ್ಲಿಸಿರುವ ರೂ. 60.00 ಲಕ್ಷಗಳ ಅಂದಾಜು ಪಟ್ಟಿಗೆ ಅನುಮೋದನೆಯನ್ನು ನೀಡಿ, ಸದರಿ ಕಾಮಗಾರಿಯನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ಉಪವಿಭಾಗ, ರಾಯಚೂರು ಇವರ ಮುಖಾಂತರ ಕೈಗೊಳ್ಳಲು ಹಾಗೂ ಈ ವೆಚ್ಚವನ್ನು ರಿಮ್ಸ್ ಸಂಸ್ಥೆಯ ನಿರ್ವಹಣಾ ಖಾತೆಯಿಂದ ಭರಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ಬೋದಕ ಆಸ್ಪತ್ರೆಯಲ್ಲಿ ಎಂ.ಆರ್.ಐ ಉಪಕರಣದ ಸುರಕ್ಷತೆಯ ಹಿತ ದೃಷ್ಟಿಯಿಂದ ಎಂ.ಆರ್.ಐ ಉಪಕರಣಕ್ಕೆ ನಿರಂತರವಾಗಿ ವಿದ್ಯುತ್ ಸರಬರಾಜು ಮಾಡುವ ಸಂಬಂಧ ಪ್ರತ್ಯೇಕವಾಗಿ 300 ಕೆವಿಎ ಜನರೇಟರ್ ಹಾಗೂ 300 ಕೆವಿಎ ಟ್ರಾನ್ಸ್‌ಫಾರ್ಮರ್‌ನ್ನು ಅಳವಡಿಸಲು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ಉಪವಿಭಾಗ, ರಾಯಚೂರು ಇವರು ಸಲ್ಲಿಸಿರುವ ರೂ. 60.00 ಲಕ್ಷಗಳ ಅಂದಾಜು ಪಟ್ಟಿಯನ್ನು ಪರಿಶೀಲಿಸಿ ಸದರಿಯವರ ಮುಖಾಂತರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಇ-ಟೆಂಡರ್ ಮೂಲಕ ಕಾಮಗಾರಿಯನ್ನು ಕೈಗೊಳ್ಳಲು ಅನುಮೋದನೆ ನೀಡಲಾಯಿತು. ಹಾಗೂ ಈ ವೆಚ್ಚವನ್ನು ರಿಮ್ಸ್ ಸಂಸ್ಥೆಯ ನಿರ್ವಹಣಾ

| | |
|---|---|
| (ಡಾ.ಕವಿತಾ ಪಾಟೀಲ್), | (ಜಾವೇದ್ ಅಖ್ತರ್), ಭಾ.ಆ.ಸೇ, |
| ನಿರ್ದೇಶಕರು, | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, |
| ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, |
| ರಾಯಚೂರು | ಬೆಂಗಳೂರು |

ಖಾತೆಯಲ್ಲಿ ಸಂಗ್ರಹವಿರುವ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 04 | ರಿಮ್ಸ್ ಕೇಂದ್ರ ಗ್ರಂಥಾಲಯಕ್ಕೆ ಸಿಸಿಟಿವಿ, ಸ್ಕ್ಯಾನರ್, ಅಟೋಮೇಶನ್ ಸಾಫ್ಟವೇರ್ ಅಳವಡಿಸುವುದು, ಮೆಶ್ ಅಳವಡಿಸುವುದು, ಕರ್ಟನ್ಸ್, ಸ್ಟೀಲ್ ರ್‍ಯಾಕ್ಸ್, ಎಲ್.ಸಿ.ಡಿ ಕ್ಯಾಬಿನ್, ಪೀಠೋಪಕರಣಗಳು ಮತ್ತು ಸರ್ಕ್ಯೂಲೇಶನ್ ಕೌಂಟರ್‌ನ್ನು ನಿರ್ಮಿಸಲು ಅನುಮತಿ ನೀಡುವ ಬಗ್ಗೆ. |

ರಿಮ್ಸ್ ಸಂಸ್ಥೆಯಲ್ಲಿ ವೈದ್ಯಕೀಯ ಪ್ರವೇಶಾತಿಯನ್ನು 100 ರಿಂದ 150 ಕ್ಕೆ ಹೆಚ್ಚಳ ಮಾಡಿರುವುದರಿಂದ, ವೈದ್ಯ ವಿದ್ಯಾರ್ಥಿಗಳ ಪ್ರವೇಶಾತಿಗೆ ಅನುಗುಣವಾಗಿ ರಿಮ್ಸ್ ಕೇಂದ್ರ ಗ್ರಂಥಾಲಯವನ್ನು ಮಾರ್ಪಡಿಸಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ ಕಾರ್ಯದರ್ಶಿಗಳು, ರಿಮ್ಸ್ ಕೇಂದ್ರ ಗ್ರಂಥಾಲಯ ಇವರು ಗ್ರಂಥಾಲಯಕ್ಕೆ ಸಿಸಿಟಿವಿ, ಸ್ಕ್ಯಾನರ್, ಅಟೋಮೇಶನ್ ಸಾಫ್ಟವೇರ್ ಅಳವಡಿಸುವುದು, ಮೆಶ್ ಅಳವಡಿಸುವುದು, ಕರ್ಟನ್ಸ್, ಸ್ಟೀಲ್ ರ್‍ಯಾಕ್ಸ್, ಎಲ್.ಸಿ.ಡಿ ಕ್ಯಾಬಿನ್, ಪೀಠೋಪಕರಣಗಳು ಮತ್ತು ಸರ್ಕ್ಯೂಲೇಶನ್ ಕೌಂಟರ್‌ನ್ನು ನಿರ್ಮಿಸಿ ಕೊಡುವಂತೆ ಕೋರಿ ಮನವಿಯನ್ನು ರಿಮ್ಸ್ ಕಾರ್ಯಲಯಕ್ಕೆ ಸಲ್ಲಿಸಿರುತ್ತಾರೆ. ಸದರಿ ಕಾರ್ಯಗಳನ್ನು ಕೈಗೊಳ್ಳಲು ರಿಮ್ಸ್ ಸಂಸ್ಥೆಯ ನಿರ್ವಹಣಾ ಖಾತೆ ಸಂಖ್ಯೆ 62129977456 ರಲ್ಲಿ ಅನುದಾನ ಲಭ್ಯವಿರುತ್ತದೆ.

ಕಾರಣ ರಿಮ್ಸ್ ಕೇಂದ್ರ ಗ್ರಂಥಾಲಯಕ್ಕೆ ಅವಶ್ಯವಿರುವ ಸಿಸಿಟಿವಿ, ಸ್ಕ್ಯಾನರ್, ಅಟೋಮೇಶನ್ ಸಾಫ್ಟವೇರ್ ಅಳವಡಿಸುವುದು, ಮೆಶ್ ಅಳವಡಿಸುವುದು, ಕರ್ಟನ್ಸ್, ಸ್ಟೀಲ್ ರ್‍ಯಾಕ್ಸ್, ಎಲ್.ಸಿ.ಡಿ ಕ್ಯಾಬಿನ್, ಪೀಠೋಪಕರಣಗಳು ಮತ್ತು ಸರ್ಕ್ಯೂಲೇಶನ್ ಕೌಂಟರ್‌ನ್ನು ನಿರ್ಮಾಣ ಕಾರ್ಯವನ್ನು ನಿಯಮಾನುಸಾರ ಕೈಗೊಳ್ಳಲು ಹಾಗೂ ಈ ವೆಚ್ಚವನ್ನು ರಿಮ್ಸ್ ಸಂಸ್ಥೆಯ ನಿರ್ವಹಣಾ ಖಾತೆಯಲ್ಲಿ ಲಭ್ಯವಿರುವ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ಭಾರತೀಯ ವೈದ್ಯಕೀಯ ಮಂಡಳಿಯ ನಿಯಮದಂತೆ ರಿಮ್ಸ್ ಕೇಂದ್ರ ಗ್ರಂಥಾಲಯವನ್ನು ಸುಸಜ್ಜಿತಗೊಳಿಸಲು ಅವಶ್ಯವಿರುವ ಸಿಸಿಟಿವಿ, ಸ್ಕ್ಯಾನರ್, ಅಟೋಮೇಶನ್ ಸಾಫ್ಟವೇರ್ ಅಳವಡಿಸುವುದು, ಮೆಶ್ ಅಳವಡಿಸುವುದು, ಕರ್ಟನ್ಸ್, ಸ್ಟೀಲ್ ರ್‍ಯಾಕ್ಸ್, ಎಲ್.ಸಿ.ಡಿ ಕ್ಯಾಬಿನ್, ಪೀಠೋಪಕರಣಗಳು ಮತ್ತು ಸರ್ಕ್ಯೂಲೇಶನ್ ಕೌಂಟರ್‌ನ್ನು ನಿರ್ಮಾಣ ಕಾರ್ಯವನ್ನು ನಿಯಮಾನುಸಾರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಇ–ಟೆಂಡರ್ ಮೂಲಕ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು. ಹಾಗೂ ಈ ವೆಚ್ಚವನ್ನು ರಿಮ್ಸ್ ಸಂಸ್ಥೆಯ ನಿರ್ವಹಣಾ ಖಾತೆಯಲ್ಲಿ ಸಂಗ್ರಹವಾಗಿರುವ ಅನುದಾನದಿಂದ ಭರಿಸಲು ಅನುಮತಿ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 05 | ರಿಮ್ಸ್ ವೈದ್ಯಕೀಯ ಕಾಲೇಜಿನ ಕಟ್ಟಡದ 04 ಮುಖ್ಯ ದ್ವಾರಗಳಲ್ಲಿ ಸ್ಟೀಲ್ ಗ್ರೀಲ್ ಗೇಟ್‌ಗಳನ್ನು ಅಳವಡಿಸುವ ಬಗ್ಗೆ. |

ರಿಮ್ಸ್ ವೈದ್ಯಕೀಯ ಕಾಲೇಜಿನ್ ಕಟ್ಟಡದಲ್ಲಿ ಒಟ್ಟು 04 ಮುಖ್ಯ ದ್ವಾರಗಳಿದ್ದು, ಎಲ್ಲಾ ದ್ವಾರಗಳಿಗೆ ಗ್ಲಾಸ್ ಡೋರ್‌ಗಳಾಗಿದ್ದು, ತೆರೆದ ಡೋರ್‌ಗಳಾಗಿರುತ್ತವೆ. ಇದರಿಂದಾಗಿ ರಜಾ ದಿನಗಳಲ್ಲಿ ವೈದ್ಯಕೀಯ ಕಾಲೇಜಿನ ಒಳಗಡೆ ಅಪರಿಚಿತರು, ನೇರವಾಗಿ ವೈದ್ಯಕೀಯ ಕಾಲೇಜ್‌ನ್ನು ಪ್ರವೇಶಿಸುತ್ತಿದ್ದಾರೆ. ಇದರಿಂದಾಗಿ ಆಸ್ಪತ್ರೆಗೆ ಭದ್ರತೆಯಿಲ್ಲದಂತಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟಲು ವೈದ್ಯಕೀಯ ಕಾಲೇಜಿನ ಮುಖ್ಯ ದ್ವಾರಗಳಿಗೆ ಸ್ಟೀಲ್ ಡೋರ್‌ಗಳನ್ನು ಅಳವಡಿಸಿ ಲಾಕ್ ಸಿಸ್ಟಮ್ ಮಾಡಲು ತೀರ್ಮಾನಿಸಲಾಗಿರುತ್ತದೆ. ಈ ಹಿನ್ನಲೆಯಲ್ಲಿ ಮೆ॥ ಎಸ್. ಎಸ್. ಭವಾನಿ ಸ್ಟೀಲ್, ರಾಯಚೂರು ಇವರನ್ನು ಕೋರಲಾಗಿ ಸದರಿಯವರು ಒಟ್ಟು 04 ಮುಖ್ಯ ದ್ವಾರಗಳಿಗೆ ಸ್ಟೀಲ್ ಡೋರ್ ಅಳವಡಿಸಲು ಮತ್ತು ಲಾಕ್ ಸಿಸ್ಟಮ್ ಮಾಡಲು ಅಂದಾಜು ರೂ. 6.00 ಲಕ್ಷಗಳಾಗುವ ಸಾಧ್ಯತೆಯಿದೆಯಂದು ತಿಳಿಸಿರುತ್ತಾರೆ. ಮತ್ತು ಈ ಕಾರ್ಯವನ್ನು ರಾಯಚೂರಿನಲ್ಲಿ ಮೆ॥ ಭವಾನಿ ಸ್ಟೀಲ್ ಇವರು ಮಾತ್ರ ನಿರ್ವಹಿಸುತ್ತಿದ್ದಾರೆ.

| | |
|---|---|
| (ಡಾ.ಕವಿತಾ ಪಾಟೀಲ್),<br>ನಿರ್ದೇಶಕರು,<br>ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,<br>ರಾಯಚೂರು | (ಜಾವೇದ್ ಅಖ್ತರ್), ಭಾ.ಆ.ಸೇ,<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ,<br>ಬೆಂಗಳೂರು |

ವೈದ್ಯಕೀಯ ಕಾಲೇಜಿನ 04 ಮುಖ್ಯ ದ್ವಾರಗಳಿಗೆ ಸ್ಟೀಲ್ ಡೋರ್‌ಗಳನ್ನು ಅಳವಡಿಸಲು ರಿಮ್ಸ್ ಸಂಸ್ಥೆಯ ನಿರ್ವಹಣಾ ಖಾತೆ ಸಂಖ್ಯೆ 62129977456 ರಲ್ಲಿ ಅನುದಾನ ಲಭ್ಯವಿರುತ್ತದೆ.

ಕಾರಣ ರಿಮ್ಸ್ ವೈದ್ಯಕೀಯ ಕಾಲೇಜಿನ ಕಟ್ಟಡದ 04 ಮುಖ್ಯ ದ್ವಾರಗಳಲ್ಲಿ ಅಪರಿಚಿತರು ಪ್ರವೇಶಿಸದಂತೆ 04 ದ್ವಾರಗಳಿಗೆ ಮೆ॥ ಎಸ್.ಎಸ್. ಭವಾನಿ ಸ್ಟೀಲ್, ರಾಯಚೂರು ಇವರ ಮುಖಾಂತರ ಸ್ಟೀಲ್ ಡೋರ್‌ಗಳನ್ನು ಅಳವಡಿಸಲು ಅನುಮತಿ ಹಾಗೂ ಈ ವೆಚ್ಚವನ್ನು ರಿಮ್ಸ್ ಸಂಸ್ಥೆಯ ನಿರ್ವಹಣಾ ಖಾತೆ ಸಂಖ್ಯೆ 62129977456 ರ ಮುಖಾಂತರ ಭರಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ವೈದ್ಯಕೀಯ ಕಾಲೇಜಿನ 04 ಮುಖ್ಯ ದ್ವಾರಗಳಿಗೆ ಭದ್ರತೆಯ ಹಿತದೃಷ್ಟಿಯಿಂದ ಸ್ಟೀಲ್ ಡೋರ್‌ಗಳನ್ನು ಅಳವಡಿಸಲು ನಿಯಮಾನುಸಾರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಇ-ಟೆಂಡರ್ ಮೂಲಕ ಕ್ರಮ ಕೈಗೊಳ್ಳಲು ಅನುಮತಿ ನೀಡಲಾಯಿತು ಹಾಗೂ ಈ ವೆಚ್ಚವನ್ನು ರಿಮ್ಸ್ ಸಂಸ್ಥೆಯ ನಿರ್ವಹಣಾ ಖಾತೆ ಸಂಖ್ಯೆ 62129977456 ರಲ್ಲಿ ಸಂಗ್ರಹವಿರುವ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 06 | ರಿಮ್ಸ್ ಬೋಧಕ ಆಸ್ಪತ್ರೆಯ ಆವರಣದಲ್ಲಿ ಹೊಸದಾಗಿ ಆಕ್ಸಿಜನ್ ಪ್ಲಾಂಟ್‌ನ್ನು ನಿರ್ಮಿಸಲು ಅನುಮತಿ ನೀಡುವ ಕುರಿತು. |

ರಿಮ್ಸ್ ಬೋಧಕ ಆಸ್ಪತ್ರೆಯ ರೋಗಿಗಳಿಗೆ ಚಿಕಿತ್ಸೆಯ ನಿಮಿತ್ತ ಪ್ರತಿ ನಿತ್ಯ ಅವಶ್ಯವಿರುವ ಆಕ್ಸಿಜನ್ ಮತ್ತು ನೈಟ್ರೋಸ್ ಆಕ್ಸೈಡ್ ಅನಿಲದ ಖಾಲಿ ಸಿಲೆಂಡರ್‌ಗಳನ್ನು ಭರ್ತಿ ಮಾಡಿ ಪೂರೈಸಲಾಗುತ್ತಿದೆ. ಹಾಗೂ ಖಾಲಿ ಸಿಲೆಂಡರ್‌ಗಳನ್ನು ಭರ್ತಿ ಮಾಡಲು ನೀಡಿರುವ ಗುತ್ತಿಗೆ ಅವಧಿಯು ಮುಕ್ತಾಯದ ಹಂತದಲ್ಲಿರುತ್ತದೆ.

ರಿಮ್ಸ್ ಬೋಧಕ ಆಸ್ಪತ್ರೆಗೆ ಖಾಲಿ ಸಿಲೆಂಡರ್‌ಗಳನ್ನು ಭರ್ತಿ ಮಾಡುವ ಬದಲಾಗಿ ಅವಶ್ಯವಿರುವ ದ್ರವ್ಯ ಆಮ್ಲಜನಕ ಘಟಕವನ್ನು ಆಸ್ಪತ್ರೆಯ ಆವರಣದಲ್ಲಿ ಸ್ಥಾಪಿಸಿದಲ್ಲಿ ಈ ಕೆಳಗಿನಂತೆ ಅನುಕೂಲವಾಗುತ್ತದೆ.

1) ಸಿಬ್ಬಂದಿ ವೆಚ್ಚ ಕಡಿಮೆಯಾಗುತ್ತದೆ.
2) ನಿರಂತರವಾಗಿ ಆಸ್ಪತ್ರೆಯ ರೋಗಿಗಳಿಗೆ ಯಾವುದೇ ಅಡಚಣೆಯಿಲ್ಲದೇ ಅವಶ್ಯದ್ರವ್ಯ ಆಮ್ಲಜನಕವನ್ನು ಪೂರೈಸಬಹುದಾಗಿದೆ.
3) ಸಾರಿಗೆ ವೆಚ್ಚ ಕಡಿಮೆಯಾಗುತ್ತದೆ.
4) ಆಮ್ಲಜನಕ ಸೋರಿಕೆಯನ್ನು ಗಣನೀಯವಾಗಿ ಕಡಿಮೆ ಮಾಡುತ್ತದೆ.
5) ನಿರ್ವಹಣಾ ವೆಚ್ಚ ಕಡಿಮೆಯಾಗುತ್ತದೆ.

ಸದರಿ ಘಟಕವನ್ನು ಇತರ ಹಲವು ಸರ್ಕಾರಿ ಸ್ವಾಯತ್ತ ಸಂಸ್ಥೆಗಳಲ್ಲಿ ಅಳವಡಿಸಲಾಗಿದ್ದು, ಯಶಸ್ವಿಯಾಗಿ ದ್ರವ್ಯ ಆಮ್ಲಜನಕ ಘಟಕ ಕಾರ್ಯನಿರ್ವಹಿಸುತ್ತಿದೆ. ರಿಮ್ಸ್ ಸಂಸ್ಥೆಗೆ 1000 ಹಾಸಿಗೆಗಳ ಸಾಮಾರ್ಥ್ಯಕ್ಕೆ ಅನುಗುಣವಾಗಿ ಘಟಕದ ಅವಶ್ಯಕತೆಯಿರುತ್ತದೆ. ಸದರಿ ಘಟಕವನ್ನು ಸ್ಥಾಪಿಸಲು ಸಲ್ಲುವ ವೆಚ್ಚವನ್ನು ರಿಮ್ಸ್ ಸಂಸ್ಥೆಯ ನಿರ್ವಹಣಾ ಖಾತೆ ಸಂಖ್ಯೆ 62129977456 ರಲ್ಲಿ ಸಂಗ್ರಹವಾಗಿರುವ ಅನುದಾನದಿಂದ ಪಾವತಿಸಬಹುದಾಗಿರುತ್ತದೆ.

ಕಾರಣ ರಿಮ್ಸ್ ಬೋಧಕ ಆಸ್ಪತ್ರೆಯ ಆವರಣದಲ್ಲಿ ಹೊಸದಾಗಿ ಆಕ್ಸಿಜನ್ ಪ್ಲಾಂಟ್‌ನ್ನು ನಿರ್ಮಿಸಲು ಹಾಗೂ ಈ ವೆಚ್ಚವನ್ನು ನಿರ್ವಹಣಾ ಖಾತೆ ಸಂಖ್ಯೆ 62129977456 ಅಡಿಯಲ್ಲಿ ಭರಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

(ಡಾ.ಕವಿತಾ ಪಾಟೀಲ್),
ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಜಾವೇದ್ ಅಖ್ತರ್), ಭಾ.ಆ.ಸೇ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ,
ಬೆಂಗಳೂರು

ಸಭೆಯ ತೀರ್ಮಾನ :–

ರಿಮ್ಸ್ ಬೋಧಕ ಆಸ್ಪತ್ರೆಯ ಆವರಣದಲ್ಲಿ 1000 ಹಾಸಿಗೆಗಳ ಸಾಮಾರ್ಥ್ಯಕ್ಕೆ ಅನುಗುಣವಾಗಿ ಅವಶ್ಯವಿರುವ ಹೊಸ ಆಕ್ಸಿಜನ್ ಪ್ಲಾಂಟ್‌ನ್ನು ನಿಯಮಾನುಸಾರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಇ–ಟೆಂಡರ್ ಮೂಲಕ ಕ್ರಮ ಕೈಗೊಂಡು ಆಕ್ಸಿಜನ್ ಪ್ಲಾಂಟ್‌ನ್ನು ನಿರ್ಮಾಣ ಮಾಡಲು ಆರ್ಥಿಕ ಸಮಿತಿ ಸರ್ವಾನುಮತದಿಂದ ಅನುಮತಿ ನೀಡಲಾಯಿತು ಹಾಗೂ ಸದರಿ ಪ್ಲಾಂಟ್‌ನ್ನು ನಿರ್ಮಾಣ ಮಾಡಲು ಸಲ್ಲುವ ವೆಚ್ಚವನ್ನು ನಿರ್ವಹಣಾ ಖಾತೆ ಸಂಖ್ಯೆ 62129977456 ಅಡಿಯಲ್ಲಿ ಸಂಗ್ರಹವಿರುವ ಅನುದಾನದಿಂದ ಭರಿಸಲು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 07 | ರಿಮ್ಸ್ ಬೋದಕ ಆಸ್ಪತ್ರೆಯಲ್ಲಿ ಇ – ಹಾಸ್ಪಿಟಲ್‌ನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಸಂಬಂಧ ಸಿಸಿಟಿವಿಗಳನ್ನು ದುರಸ್ಥಿಗೊಳಿಸಿ, ಹೊಸದಾಗಿ ಲ್ಯಾನ್ ಸಂಪರ್ಕವನ್ನು ಕಲ್ಪಿಸಲು ಪ್ರಸ್ತಾವನೆಯನ್ನು ಮರು ಮಂಡಿಸಿರುವ ಬಗ್ಗೆ. |

ರಿಮ್ಸ್ ಆವರಣದಲ್ಲಿರುವ 520 ಹಾಸಿಗೆಗಳ ಬೋಧಕ ಆಸ್ಪತ್ರೆಯಲ್ಲಿ ಆಗು ಹೋಗುವ ಚಲನವಲನಗಳು, ಹೊರಗಿನ ಚಲನ ವಲನಗಳನ್ನು ಗಮನಿಸಲು ಮತ್ತು ಆಸ್ಪತ್ರೆಯಲ್ಲಿ ಶಿಸ್ತನ್ನು ಕಾಪಾಡಲು ಮತ್ತು ರಾಜ್ಯದಲ್ಲಿ ಉತ್ತಮ ಮಾಧರಿ ಆಸ್ಪತ್ರೆಯನ್ನಾಗಿ ಮಾಡಲು ಹಾಗೂ ಸಂಸ್ಥೆಯ ಭದ್ರತೆ ಹಾಗೂ ಸುರಕ್ಷತೆಯ ಹಿತದೃಷ್ಟಿಯಿಂದ ನೂತನ ಬೋಧಕ ಆಸ್ಪತ್ರೆಗೆ ಸಿಸಿಟಿವಿ, ಡಾಟ ನೆಟ್‌ವರ್ಕ, ಪಬ್ಲಿಕ್ ಅಡ್ರಸ್ ಸಿಸ್ಟಮ್ ಹಾಗೂ ಐಪಿಬಿಎಕ್ಸ್ ನ್ನು ಕಾಮಗಾರಿಗಳನ್ನು ಸರ್ಕಾರದ ನಿರ್ದೇಶನದಂತೆ, ಕಿಯೋನಿಕ್ಸ್ ಸಂಸ್ಥೆಯ ಮುಖಾಂತರ ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಸರ್ಕಾರವು ಅನುಮೋದನೆಯನ್ನು ನೀಡಿರುತ್ತದೆ. ಅದೇ ರೀತಿ ಕಿಯೋನಿಕ್ಸ್ ಸಂಸ್ಥೆಯು ಟೆಂಡರ್ ಆಹ್ವಾನಿಸಿ ಸದರಿ ಕಾರ್ಯವನ್ನು ಮೆ॥ ಜಿಲ್ ಇನ್ ಫಾರ್ಮಶನ್ ಟೆಕ್ನಾಲಜಿ, ಬೆಂಗಳೂರು ಇವರಿಗೆ ಕಾರ್ಯದೇಶವನ್ನು ನೀಡಿರುತ್ತದೆ. ಮೆ॥ ಜಿಲ್ ಇನ್ ಫಾರ್ಮಶನ್ ಟೆಕ್ನಾಲಜಿ, ಬೆಂಗಳೂರು ಇವರು ಆಸ್ಪತ್ರೆಗೆ ಸಿಸಿಟಿವಿ, ಡಾಟ ನೆಟ್‌ವರ್ಕ, ಪಬ್ಲಿಕ್ ಅಡ್ರಸ್ ಸಿಸ್ಟಮ್ ಹಾಗೂ ಐಪಿಬಿಎಕ್ಸ್ ನ್ನು ಅಳವಡಿಸಿರುತ್ತಾರೆ.

ಸದರಿ ಉಪಕರಣಗಳನ್ನು ಅಳವಡಿಸಿ ಸುಮಾರು 04 ವರ್ಷಗಳಾಗಿರುವುದರಿಂದ ಹಾಗೂ ಉಪಕರಣಗಳ ವಾರೆಂಟಿ ಅವಧಿಯು ಪೂರ್ಣಗೊಂಡಿರುವುದರಿಂದ ದಿ.23.01.2016 ರ ಪತ್ರದ ಮೂಲಕ ಮೆ॥ ಜಿಲ್ ಇನ್‌ಫಾರ್ಮಮೇಶನ್ ಟೆಕ್ನಾಲಜಿಸ್, ಬೆಂಗಳೂರು ಇವರು ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಸಿಸಿಟಿವಿ, ಡಾಟ ನೆಟ್‌ವರ್ಕಿಂಗ್, ಪಬ್ಲಿಕ್ ಅಡ್ರಸ್ ಸಿಸ್ಟಮ್ ಮತ್ತು ಐಪಿಬಿಎಕ್ಸ್‌ಗಳನ್ನು ಸಂಪೂರ್ಣವಾಗಿ ಅಳವಡಿಸಲಾಗಿದ್ದು, ಸದರಿ ಸಂಸ್ಥೆಯಲ್ಲಿ ಪದೇ ಪದೇ ವಿದ್ಯುತ್ ಲೋಡ್ ಶೆಡ್ಡಿಂಗ್ ಆಗುತ್ತಿರುವುದರಿಂದ ಉಪಕರಣಗಳಿಗೆ ಹಾನಿಯಾಗುತ್ತಿದ್ದು, ಸದರಿ ಉಪಕರಣಗಳು ಸರಿಯಾಗಿ ಕಾರ್ಯನಿರ್ವಹಿಸುವಂತೆ ಮಾಡಲು ಯೂಪಿಎಸ್‌ಗಳ ಅವಶ್ಯಕತೆಯಿದೆಯಂದು ತಿಳಿಸಿದ ಹಿನ್ನಲೆಯಲ್ಲಿ ಉಪಕರಣಗಳ ಸುರಕ್ಷತೆಯ ಹಿತದೃಷ್ಟಿಯಿಂದ ಆಸ್ಪತ್ರೆ ನೆಲಮಹಡಿಯಿಂದ ಆರನೇ ಮಹಡಿಯವರೆಗೆ 5 ಕೆವಿ ಸಾಮಾರ್ಥ್ಯದ ಆನ್‌ಲೈನ್ ಯೂಪಿಎಸ್‌ಗಳನ್ನು ಡಿಜಿಎಸ್ & ಡಿ ದರದಲ್ಲಿ ಖರೀದಿಸಿ ಪೂರೈಸಲಾಗಿರುತ್ತದೆ.

ಆದರೆ ಪದೇ ಪದೇ ಸಿಸಿಟಿವಿ ಕ್ಯಾಮರಗಳು ದುರಸ್ಥಿಗೆ ಬರುತ್ತಿರುವುದರಿಂದ ಈ ಕಾರ್ಯಲಯದ ಪತ್ರ ಸಂಖ್ಯೆ. ರಿಮ್ಸ್ / ಸಾಮಾನ್ಯ / 2017–18 / 20 ದಿನಾಂಕ 11.10.2017 ಮೆ॥ ಜಿಲ್ ಇನ್‌ಫಾರ್ಮಮೇಶ್‌ನ ಟೆಕ್ನಾಲಜಿಸ್ ಇವರಿಗೆ ಪತ್ರ ಬರೆಯಲಾಗಿ, ಆಸ್ಪತ್ರೆಯಲ್ಲಿನ ಉಪಕರಣಗಳ ಸುರಕ್ಷತೆ ಮತ್ತು ಭದ್ರತೆಯ ಹಿತದೃಷ್ಟಿಯಿಂದ ದುರಸ್ಥಿಯಲ್ಲಿರುವ ಸಿಸಿ ಕ್ಯಾಮರಗಳು ಮತ್ತು ಐಪಿಬಿಎಕ್ಸ್ ಉಪಕರಣಗಳನ್ನು ದುರಸ್ಥಿ ಮಾಡುವ ಸಂಬಂಧ ತಗುಲಬಹುದಾದ ಅಂದಾಜು ವೆಚ್ಚದ ಬಗ್ಗೆ ವಿವರವಾದ ಅಂದಾಜು ಪಟ್ಟಿಯನ್ನು ಸಲ್ಲಿಸುವಂತೆ ಕೋರಲಾಗಿತ್ತು.

| | |
|---|---|
| (ಡಾ.ಕವಿತಾ ಪಾಟೀಲ್), | (ಜಾವೇದ್ ಅಖ್ತರ್), ಭಾ.ಆ.ಸೇ, |
| ನಿರ್ದೇಶಕರು, | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, |
| ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, |
| ರಾಯಚೂರು | ಬೆಂಗಳೂರು |

ಸದರಿಯವರು ಈವರೆಗೆ 3 ಬಾರಿ ತಮ್ಮ ಕಂಪನಿ ವತಿಯಿಂದ ಸಿಬ್ಬಂದಿಗಳನ್ನು ನಿಯೋಜಿಸಿ, ಸರ್ವೆ ಕಾರ್ಯವನ್ನು ಜರುಗಿಸಿ ದಿನಾಂಕ 05.09.2018 ರಂದು ಆಸ್ಪತ್ರೆಯಲ್ಲಿ ಅಳವಡಿಸಲಾಗಿರುವ ಡಾಟ ನೆಟ್‌ವರ್ಕಿಂಗ್ ಹಾಗೂ ಕ್ಯಾಮರಾಗಳ ದುರಸ್ಥಿ ಕಾರ್ಯದ ಬಗ್ಗೆ ಒಟ್ಟು ರೂ. 34,59,000/- (ಜಿಎಸ್‌ಟಿ ಪ್ರತ್ಯೇಕ) ಗಳನ್ನು ರಿಮ್ಸ್ ಕಾರ್ಯಲಯಕ್ಕೆ ಸಲ್ಲಿಸಿರುತ್ತಾರೆ.

ಮೆ॥ ಜಿಲ್ ಇನ್‌ಫಾರ್ಮಮೇಶ್‌ನ ಟೆಕ್ನಾಲಜಿಸ್, ಬೆಂಗಳೂರು ಇವರಿಂದು ಸಿಸಿಟಿವಿಗಳ ದುರಸ್ಥೀ ಕಾರ್ಯ ಮತ್ತು ಐಪಿ ಪೋನ್‌ಗಳ ಅಳವಡಿಸುವುದು ವಿಳಂಬವಾಗಿದ್ದರಿಂದ ಹಾಗೂ ಸದರಿ ವಿಷಯದ ಕುರಿತು ಮೆ॥ ಜಿಲ್ ಇನ್ ಫಾರ್ಮಶನ್ ಟೆಕ್ನಾಲಜಿ ಇವರಿಗೆ ಹಲವಾರು ಪತ್ರ ವ್ಯವಹರಿಸಿದರೂ ಸಹ ಯಾವುದೇ ಪ್ರಯೋಜನವಾಗದೇ ಇರುವುದರಿಂದ ಸದರಿ ವಿಷಯವನ್ನು ದಿನಾಂಕ 13.11.2018 ರಂದು ಜರುಗಿದ ರಿಮ್ಸ್ ಸಂಸ್ಥೆಯ 14 ನೇ ಆರ್ಥಿಕ ಸಮಿತಿ ಸಭೆಯಲ್ಲಿ ಸದರಿ ವಿಷಯವನ್ನು ಮಂಡಿಸಲಾಗಿ ಆರ್ಥಿಕ ಸಮಿತಿ ಸಭೆಯಿ ಈ ಕೆಳಗಿನಂತೆ ಅನುಮೋದನೆಯನ್ನು ನೀಡಿರುತ್ತದೆ.

"ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಕಿಯೋನಿಕ್ಸ್ ಸಂಸ್ಥೆಯ ಮುಖಾಂತರ ಈಗಾಗಲೇ ಅಳವಡಿಸಲಾಗಿರುವ ಸಿಸಿಟಿವಿ, ಡಾಟ ನೆಟ್‌ವರ್ಕ, ಪಬ್ಲಿಕ್ ಅಡ್ರೆಸ್ ಸಿಸ್ಟಮ್ ಹಾಗೂ ಐಪಿಬಿಎಕ್ಸ್ ಗಳ ಸಮರ್ಪಕವಾಗಿ ಕಾರ್ಯನಿರ್ವಹಿಸದೇ ಇರುವುದರಿಂದ, ಟೆಂಡರ್‌ದಾರರಾದ ಮೆ॥ ಜಿಲ್ ಇನ್‌ಫಾರ್ಮಮೇಶನ್ ಟೆಕ್ನಾಲಜಿ, ಬೆಂಗಳೂರು ಇವರ ಟೆಂಡರ್‌ನ್ನು ಬ್ಲಾಕ್ ಪಟ್ಟಿಗೆ ಸೇರಿಸುವ ಬಗ್ಗೆ ವಿವರವಾದ ಮಾಹಿತಿಯನ್ನು ಕಿಯೋನಿಕ್ಸ್ ಸಂಸ್ಥೆಗೆ ಸಲ್ಲಿಸಿ ಅದರ ಒಂದು ಪ್ರತಿಯನ್ನು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಲಾಯಿತು.

ಇ- ಹಾಸ್ಪಿಟಲ್‌ನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ರಿಮ್ಸ್ ಬೋದಕ ಆಸ್ಪತ್ರೆಯಲ್ಲಿ ಪ್ರತ್ಯೇಕ ಲ್ಯಾನ್ ಕೇಬಲ್‌ನ್ನು ನಿಯಮಾನುಸಾರ ಅಳವಡಿಸಿಕೊಳ್ಳಲು ಅನುಮೋದನೆ ನೀಡಲಾಯಿತು. ಇದಕ್ಕೆ ತಗುಲುವ ವೆಚ್ಚವನ್ನು ನಿರ್ಭಯ ಯೋಜನೆ ಅಡಿಯಲ್ಲಿ ಭರಿಸಲು ಅನುಮತಿ ನೀಡಲಾಯಿತು".

14ನೇ ಆರ್ಥಿಕ ಸಮಿತಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದ ಬಗ್ಗೆ ನಿರ್ದೇಶಕರು, ಪ್ರಾಂಶುಪಾಲರು, ವೈದ್ಯಕೀಯ ಅಧೀಕ್ಷಕರು, ಸ್ಥಾನಿಕ ವೈದ್ಯಾಧಿಕಾರಿಗಳು ಜೊತೆ ಸಮಾಲೋಚಿಸಲಾಗಿ 14ನೇ ಆರ್ಥಿಕ ಸಮಿತಿ ಸಭೆಯ ನಿರ್ಣಯದಂತೆ ಮೆ॥ ಜಿಲ್ ಇನ್‌ಫಾರ್ಮಮೇಶನ್ ಟೆಕ್ನಾಲಜಿ, ಬೆಂಗಳೂರು ಇವರನ್ನು ಬ್ಲಾಕ್ ಪಟ್ಟಿಗೆ ಸೇರಿಸುವ ಬಗ್ಗೆ ಕ್ರಮ ತೆಗೆದುಕೊಂಡಲ್ಲಿ ಸಿಸಿಟಿವಿಗಳ ದುರಸ್ಥಿ, ಐಪಿ ಪೋನ್‌ಗಳ ಅಳವಡಿಕೆಯಾಗುವುದಿಲ್ಲ. ಇದರಿಂದಾಗಿ ಆಸ್ಪತ್ರೆಯ ಸುರಕ್ಷತೆ ಮತ್ತು ಭದ್ರತೆಗೆ ತೊಂಧರೆ ಉಂಟಾಗುವ ಸಾಧ್ಯತೆಯಿರುತ್ತದೆ. ಮತ್ತು ಈಗಾಗಲೇ ಇ - ಹಾಸ್ಪಿಟಲ್‌ನ ಮೊದಲನೇ ಮತ್ತು ಎರಡನೇ ಹಂತದ ಕಾರ್ಯವನ್ನು ಪೂರ್ಣಗೊಳಿಸಿರುವುದರಿಂದ 3ನೇ ಹಂತಕ್ಕೆ ಇ - ಆಸ್ಪತ್ರೆಗೆ ಲಾನ್ ವ್ಯವಸ್ಥೆಯನ್ನು ಜರೂರಾಗಿ ಅಳವಡಿಸಬೇಕಾಗಿರುತ್ತದೆ. ಸದರಿ ಕಾರ್ಯಕ್ಕೆ ಹೊಸದಾಗಿ ಟೆಂಡರ್ ಆಹ್ವಾನಿಸಿದಲ್ಲಿ ಸುಮಾರು 3 ತಿಂಗಳ ಸಮಯಾವಕಾಶವಾಗುವುದಲ್ಲದೇ, ಪ್ರತ್ಯೇಕವಾಗಿ ಲ್ಯಾನ್ ಸಂಪರ್ಕಗೊಳಿಸಲು ಸುಮಾರು 40.00 ಲಕ್ಷಗಳು ವೆಚ್ಚವಾಗುವ ಸಾಧ್ಯತೆಯಿರುತ್ತದೆ.

ಮೆ॥ ಜಿಲ್ ಇನ್‌ಫಾರ್ಮಮೇಶನ್ ಟೆಕ್ನಾಲಜಿ, ಬೆಂಗಳೂರು ಇವರು ಸಲ್ಲಿಸಿರುವ ಅಂದಾಜು ಪಟ್ಟಿ ರೂ. 34,59,000/- (ಜಿಎಸ್‌ಟಿ ಪ್ರತ್ಯೇಕ) ಗಳಿಗೆ ಅನುಮೋದನೆ ನೀಡಿದಲ್ಲಿ ಕಡಿಮೆ ಅವಧಿಯಲ್ಲಿ ಲ್ಯಾನ್ ಸಂಪರ್ಕ ಮತ್ತು ಸಿಸಿಟಿವಿ ಮತ್ತು ಐಪಿ ಪೋನ್ ಗಳು ಅಳವಡಿಕೆಯಾಗುವುದಾಗಿ ಅಭಿಪ್ರಾಯ ಪಡಲಾಗಿರುತ್ತದೆ.

ಕಾರಣ ಮೆ॥ ಜಿಲ್ ಇನ್‌ಫಾರ್ಮಮೇಶನ್ ಟೆಕ್ನಾಲಜಿ, ಬೆಂಗಳೂರು ಇವರು ಆಸ್ಪತ್ರೆಯ ಸಿಸಿಟಿವಿ ದುರಸ್ಥಿ ಹಾಗೂ ಇ - ಹಾಸ್ಪಿಟಲ್ ಅನುಷ್ಠಾನದ ಸಂಬಂಧ ಹೊಸದಾಗಿ ಲ್ಯಾನ್ ಸಂಪರ್ಕವನ್ನು ಕಲ್ಪಿಸಲು ಸಲ್ಲಿಸಿರುವ ರೂ. 34,59,000/- (ಜಿಎಸ್‌ಟಿ ಪ್ರತ್ಯೇಕ) ಗಳ ಅಂದಾಜು ಪಟ್ಟಿಗೆ ಅನುಮೋದನೆ ಹಾಗೂ ಸದರಿ ಕಾಮಗಾರಿಯನ್ನು ಮೆ॥ ಜಿಲ್ ಇನ್‌ಫಾರ್ಮಮೇಶನ್ ಟೆಕ್ನಾಲಜಿ, ಬೆಂಗಳೂರು ಇವರ ಮುಖಾಂತರ ಕೈಗೊಳ್ಳಲು ಮತ್ತು ಈ ವೆಚ್ಚವನ್ನು ನಿರ್ಭಯ ಯೋಜನೆ ಅಡಿಯಲ್ಲಿ ಒದಗಿಸಲಾಗುವ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

| | |
|---|---|
| (ಡಾ.ಕವಿತಾ ಪಾಟೀಲ್), | (ಜಾವೇದ್ ಅಖ್ತರ್), ಭಾ.ಆ.ಸೇ, |
| ನಿರ್ದೇಶಕರು, | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, |
| ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, |
| ರಾಯಚೂರು | ಬೆಂಗಳೂರು |

ಸಭೆಯ ತೀರ್ಮಾನ :-

ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಮೆ॥ ಕಿಯೋನಿಕ್ಸ್ ಮುಖಾಂತರ ಟೆಂಡರ್ ಆಹ್ವಾನಿಸಿ, ಟೆಂಡರ್‌ದಾರರಾದ ಮೆ॥ ಜಿಲ್ ಇನ್‌ಫಾರ್ಮೇಶನ್ ಟೆಕ್ನಾಲಜಿ, ಬೆಂಗಳೂರು ವತಿಯಿಂದ ಅಳವಡಿಸಲಾದ ಸಿಸಿಟಿವಿ, ಡಾಟ ನೆಟ್‌ವರ್ಕ, ಪಬ್ಲಿಕ್ ಅಡ್ರೆಸ್ ಸಿಸ್ಟಮ್ ಹಾಗೂ ಐಪಿಬಿಎಕ್ಸ್ ನ ಮಾಹಿತಿಯನ್ನು ಆರ್ಥಿಕ ಸಮಿತಿ ಸಭೆಯ ಗಮನಕ್ಕೆ ತರಲಾಯಿತು. ಆರ್ಥಿಕ ಸಮಿತಿ ಸಭೆಯು ಟೆಂಡರ್‌ದಾರರು ಆಸ್ಪತ್ರೆಯಲ್ಲಿ ಅಳವಡಿಸಲಾಗಿರುವ ಸಿಸಿಟಿವಿ, ಡಾಟ ನೆಟ್‌ವರ್ಕ, ಪಬ್ಲಿಕ್ ಅಡ್ರೆಸ್ ಸಿಸ್ಟಮ್ ಹಾಗೂ ಐಪಿಬಿಎಕ್ಸ್ ಗಳನ್ನು ಅಳವಡಿಸಿದ್ದರೂ ಸಹ ಇನ್ನು ಸಮರ್ಪಕ ಅನುಷ್ಠಾನವಾಗದೇ ಇರುವುದರಿಂದ, ಮೆ॥ ಜಿಲ್ ಇನ್‌ಫಾರ್ಮೇಶನ್ ಟೆಕ್ನಾಲಜಿ, ಬೆಂಗಳೂರು ಇವರಿಗೆ ಸದರಿ ಉಪಕರಣಗಳ ಕುರಿತು ಸಮರ್ಪಕವಾಗಿ ಅನುಷ್ಠಾನಗೊಳಿಸಿ ಕೊಡುವಂತೆ ನೋಟಿಸ್ ಜಾರಿ ಮಾಡಲು ಆರ್ಥಿಕ ಸಮಿತಿಯು ಸೂಚಿಸಲಾಯಿತು. ಒಂದು ವೇಳೆ ಟೆಂಡರ್‌ದಾರರು ನೋಟಿಸ್‌ಗೆ ಉತ್ತರಿಸದಿದ್ದಲ್ಲಿ ಮೆ॥ ಜಿಲ್ ಇನ್‌ಫಾರ್ಮೇಶನ್ ಟೆಕ್ನಾಲಜಿ, ಬೆಂಗಳೂರು ಇವರ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಮತ್ತು ಸದರಿಯವರನ್ನು ಕಪ್ಪು ಪಟ್ಟಿಗೆ **(Black List)** ಸೇರಿಸಲು ಕ್ರಮ ಕೈಗೊಳ್ಳುವಂತೆ ಹಾಗೂ ಈ ಬಗ್ಗೆ ರಾಯಚೂರಿನ **NIC (National Informatic Centre)** ವತಿಯಿಂದ ಮುಂದಿನ ಸಲಹೆಯನ್ನು ಪಡೆಯುವಂತೆ ಸೂಚಿಸಲಾಯಿತು.

ಇ- ಹಾಸ್ಪಿಟಲ್‌ನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ರಿಮ್ಸ್ ಬೋದಕ ಆಸ್ಪತ್ರೆಯಲ್ಲಿ ಪ್ರತ್ಯೇಕ ಲಾನ್ ಕೇಬಲ್‌ನ್ನು ಅವಶ್ಯಕತೆಯಿರುವುದರಿಂದ, ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಇ-ಟೆಂಡರ್ ಮೂಲಕ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಅನುಮೋದನೆ ನೀಡಲಾಯಿತು. ಹಾಗೂ ಇದಕ್ಕೆ ತಗುಲುವ ವೆಚ್ಚವನ್ನು ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ಖಾತೆಯಿಂದ ಭರಿಸಲು ಅನುಮತಿ ನೀಡಲಾಯಿತು.

| ವಿಷಯ ಸೂಚಿ ಸಂಖ್ಯೆ – 08 | **'Residential Training Programme in IISC'**, ತರಬೇತಿಗಾಗಿ ಅವಶ್ಯವಿರುವ ಉಪಕರಣಗಳನ್ನು ನಿಯಮಾನುಸಾರ ಖರೀದಿಸಿ ಪೂರೈಸುವ ಕುರಿತು |
|---|---|

ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ದಿನಾಂಕ : 28.11.2018 ರಂದು ಉಪ-ಕುಲಸಚಿವರು ಅವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ತೀರ್ಮಾನಿಸಿರುವಂತೆ ವಿಶ್ವವಿದ್ಯಾಲಯದ ಅಧೀನದಲ್ಲಿರುವ ವೈದ್ಯಕೀಯ ಕಾಲೇಜಿನ ಸಿಬ್ಬಂದಿಗಳಿಗೆ **'Residential Training Programme'** ತರಬೇತಿ ನೀಡಲು ವೈದ್ಯಕೀಯ ಕಾಲೇಜುಗಳು ತರಬೇತಿಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸುವಂತೆ ಸಭೆಯಲ್ಲಿ ಸೂಚಿಸಿರುತ್ತಾರೆ.

ಸದರಿ ಸೂಚನೆಯನ್ವಯ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ **'Residential Training Programme'** ತರಬೇತಿ ಆರಂಭಿಸಲು ಪ್ರಾಂಶುಪಾಲರು, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಇವರು ತರಬೇತಿಗೆ ಅವಶ್ಯವಿರುವ ಉಪಕರಣಗಳನ್ನು ಪೂರೈಸುವಂತೆ ದಿನಾಂಕ : 07.12.2018ರಂದು ಮನವಿಯಲ್ಲಿ ಕೋರಿರುತ್ತಾರೆ. ಹಾಗೂ ಸದರಿ ಉಪಕರಣಗಳಿಗೆ ಅಂದಾಜು ರೂ. 21.09 ಲಕ್ಷಗಳಾಗಲಿವೆ ಎಂದು ತಿಳಿಸಿರುತ್ತಾರೆ. ಸದರಿ ಉಪಕರಣಗಳನ್ನು ಖರೀದಿಸಲು ರಿಮ್ಸ್ ಸಂಸ್ಥೆಯ ನಿರ್ವಹಣಾ ಖಾತೆ ಸಂಖ್ಯೆ. 62129977456 ರಲ್ಲಿ ಅನುದಾನ ಲಭ್ಯವಿರುತ್ತದೆ.

ಕಾರಣ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧೀನಲ್ಲಿರುವ ವೈದ್ಯಕೀಯ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ **'Residential Training Programme'** ತರಬೇತಿ ನೀಡುವ ಸೌಲಭ್ಯವನ್ನು ಕಲ್ಪಿಸಲು ಅವಶ್ಯವಿರುವ ಉಪಕರಣಗಳನ್ನು ನಿಯಮಾನುಸಾರ ಖರೀದಿಸಿ ಪೂರೈಸಲು ಕೆಟಿಪಿಪಿ ಕಾಯ್ದೆಯನ್ವಯ 30 ದಿನಗಳ ಕಾಲವಕಾಶ ನೀಡಿ ಟೆಂಡರ್ ಆಹ್ವಾನಿಸಿ ಪೂರೈಸಲು ಹಾಗೂ ಈ ವೆಚ್ಚವನ್ನು ರಿಮ್ಸ್ ಸಂಸ್ಥೆಯ ನಿರ್ವಹಣಾ ಖಾತೆ ಸಂಖ್ಯೆ. 62129977456 ರ ಮುಖಾಂತರ ಪಾವತಿಸಲು ಆರ್ಥಿಕ ಸಮಿತಿ ಸಭೆಯ ಅನುಮತಿ ಕೋರಿ ಸಲ್ಲಿಸಿದೆ.

| | |
|---|---|
| (ಡಾ.ಕವಿತಾ ಪಾಟೀಲ್), | (ಜಾವೇದ್ ಅಖ್ತರ್), ಭಾ.ಆ.ಸೇ, |
| ನಿರ್ದೇಶಕರು, | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, |
| ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, |
| ರಾಯಚೂರು | ಬೆಂಗಳೂರು |

ಸಭೆಯ ತೀರ್ಮಾನ :-

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧೀನಲ್ಲಿರುವ ವೈದ್ಯಕೀಯ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ **'Residential Training Programme'** ತರಬೇತಿ ನೀಡುವ ಸೌಲಭ್ಯವನ್ನು ಕಲ್ಪಿಸಲು ಅವಶ್ಯವಿರುವ ಉಪಕರಣಗಳನ್ನು ನಿಯಮಾನುಸಾರ ಕೆಟಿಪಿಪಿ ಕಾಯ್ದೆಯನ್ವಯ 30 ದಿನಗಳ ಕಾಲವಕಾಶ ನೀಡಿ ಟೆಂಡರ್ ಆಹ್ವಾನಿಸಿ ಕ್ರಮ ಕೈಗೊಳ್ಳಲು ಆರ್ಥಿಕ ಸಮಿತಿ ಸಭೆಯು ಅನುಮತಿ ನೀಡಲಾಯಿತು ಹಾಗೂ ಈ ವೆಚ್ಚವನ್ನು ರಿಮ್ಸ್ ಸಂಸ್ಥೆಯ ನಿರ್ವಹಣಾ ಖಾತೆ ಸಂಖ್ಯೆ 62129977456 ರ ಮುಖಾಂತರ ಪಾವತಿಸಲು ಆರ್ಥಿಕ ಸಮಿತಿ ಸಭೆಯ ಅನುಮತಿ ಕೋರಿ ಸಲ್ಲಿಸಿದೆ.

| | |
|---|---|
| ವಿಷಯ ಸೂಚಿ ಸಂಖ್ಯೆ – 09 | ರಿಮ್ಸ್ ಸಂಸ್ಥೆಯ ರೋಗ ನಿರ್ಧಾರಕ ಶಾಸ್ತ್ರ ವಿಭಾಗಕ್ಕೆ ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಯ ರೇಡಿಯಾಲಜಿ ವಿಭಾಗಗಕ್ಕೆ ಅತಿ ಅವಶ್ಯವಿರುವ ಉಪಕರಣಗಳನ್ನು ನಿಯಮಾನುಸಾರ ಖರೀದಿಸಿ ಪೂರೈಸುವ ಕುರಿತು |

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಪ್ರವೇಶ ಮಿತಿಯನ್ನು 100 ರಿಂದ 150 ಕ್ಕೆ ಹೆಚ್ಚಿಸಿರುವುದರಿಂದ ರೋಗನಿರ್ಧಾರಕ ಶಾಸ್ತ್ರ ವಿಭಾಗಕ್ಕೆ ಈ ಕೆಳಕಂಡ ಉಪಕರಣಗಳು ಭಾರತೀಯ ವೈದ್ಯಕೀಯ ಮಂಡಳಿಯಿಂದ ಸ್ನಾತಕೋತ್ತರ ಪಿಜಿಗೆ ಅನುಮತಿ ಪಡೆಯಲು ಅತಿ ಅವಶ್ಯವಾಗಿರುತ್ತದೆ. ಈ ಹಿನ್ನಲೆಯಲ್ಲಿ ಪ್ರಾಧ್ಯಾಪಕರುಹಾಗೂ ವಿಭಾಗದ ಮುಖ್ಯಸ್ಥರು, ರೋಗ ನಿರ್ಧಾರಕ ಶಾಸ್ತ್ರ ವಿಭಾಗ, ರಿಮ್ಸ್, ರಾಯಚೂರು ಜರೂರಾಗಿ ಪೂರೈಸುವಂತೆ ಕೋರಿರುತ್ತಾರೆ. ಸದರಿ ಉಪಕರಣಗಳನ್ನು ಖರೀದಿಸಲು ಅಂದಾಜು ರೂ. 1,15,43,961/- ಗಳಾಗುತ್ತದೆ. ಆದರೆ ಸದರಿ ಉಪಕರಣಗಳನ್ನು ಖರೀದಿಸಲು ಸಂಸ್ಥೆಯಲ್ಲಿ ಅನುದಾನ ಲಭ್ಯವಿರುವುದಿಲ್ಲ. ಅದರ ವಿವರ ಈ ಕೆಳಗಿನಂತಿದೆ.

| SNo | Item Name | Item Code | Unit | Item Rate | Item Quantity |
|---|---|---|---|---|---|
| 1 | Cystopin | RIMS-EQP-213 | Each | 856680.00 | 1 |
| 2 | Histokinette | RIMS-EQP-214 | Each | 1648000.00 | 1 |
| 3 | Ultra High performance Liquid Chromatography | RIMS-EQP-205 | Each | 2000000.00 | 1 |
| 4 | Microscopes | RIMS-EQP-207 | Each | 34090.00 | 50 |
| 5 | Binocular Microscopes | RIMS-EQP-208 | Each | 68711.00 | 10 |
| 6 | Fully Automated 3 parts Differential Hematology Analyzer | RIMS-EQP-209 | Each | 649000.00 | 1 |
| 7 | Fully Automated 4 plate Elisa Processor | RIMS-EQP-210 | Each | 5475200.00 | 1 |
| 8 | Gel Method Blood Grouping & Cross matching | RIMS-EQP-211 | Each | 644280.00 | 1 |
| 9 | Portable Tube Sealer | RIMS-EQP-212 | Each | 168000.00 | 3 |
| | Grand Total | | | 11543961.00 | |

(ಡಾ.ಕವಿತಾ ಪಾಟೀಲ್),
ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಜಾವೇದ್ ಅಖ್ತರ್), ಭಾ.ಆ.ಸೇ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ,
ಬೆಂಗಳೂರು

ಅದೇ ರೀತಿ ರಿಮ್ಸ್ ಬೋಧಕ ಆಸ್ಪತ್ರೆಯ ರೇಡಿಯಾಲಜಿ ವಿಭಾಗಗಕ್ಕೆ ಡಿಜಿಟಲ್ ಮೆಮೋ ಗ್ರಫಿ ಉಪಕರಣದ ಅವಶ್ಯಕೆಯಿದ್ದು, ಸದರಿ ಡಿಜಿಟಲ್ ಮೆಮೋಗ್ರಫೀ ಉಪಕರಣವನ್ನು ಜರೂರಾಗಿ ಪೂರೈಸುವಂತೆ ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು, ಕ್ಷ – ಕಿರಣಾ ವಿಭಾಗ, ರಿಮ್ಸ್ ಬೋಧಕಾ ಆಸ್ಪತ್ರೆ, ರಾಯಚೂರು ಇವರು ಕೋರಿರುತ್ತಾರೆ. ಸದರಿ ಡಿಜಿಟಲ್ ಮೆಮೋಗ್ರಫಿ ಉಪಕರಣವನ್ನು ಖರೀದಿಸಲು ಅಂದಾಜು 30.00 ಲಕ್ಷಗಳಾಗುವ ಸಾಧ್ಯತೆಯಿರುತ್ತದೆಯೆಂದು ತಿಳಿಸಿರುತ್ತಾರೆ. ಆದರೆ ಸದರಿ ಉಪಕರಣವನ್ನು ಖರೀದಿಸಲು ಸಂಸ್ಥೆಯಲ್ಲಿ ಅನುದಾನ ಲಭ್ಯವಿರುವುದಿಲ್ಲ.

ಕಾರಣ ರಿಮ್ಸ್ ಸಂಸ್ಥೆಯ ರೋಗ ನಿರ್ಧಾರಕ ಶಾಸ್ತ್ರ ವಿಭಾಗ ಹಾಗೂ ರಿಮ್ಸ್ ಬೋದಕ ಆಸ್ಪತ್ರೆಯ ರೇಡಿಯಾಲಜಿ ವಿಭಾಗಗಕ್ಕೆ ಅತಿ ಅವಶ್ಯವಿರುವ ಉಪಕರಣಗಳನ್ನು ಕೆ.ಟಿ.ಪಿ.ಪಿ ಕಾಯ್ದೆಯನ್ವಯ ನಿಯಮಾನುಸಾರ ಖರೀದಿಸಿ ಪೂರೈಸುವ ಕುರಿತು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ಸಂಸ್ಥೆಯ ರೋಗ ನಿರ್ಧಾರಕ ಶಾಸ್ತ್ರ ವಿಭಾಗ ಹಾಗೂ ರಿಮ್ಸ್ ಬೋದಕ ಆಸ್ಪತ್ರೆಯ ರೇಡಿಯಾಲಜಿ ವಿಭಾಗಗಕ್ಕೆ ಅತಿ ಅವಶ್ಯವಿರುವ ಉಪಕರಣಗಳನ್ನು ಕೆ.ಟಿ.ಪಿ.ಪಿ ಕಾಯ್ದೆಯನ್ವಯ ನಿಯಮಾನುಸಾರ ಟೆಂಡರ್ ಆಹ್ವಾನಿಸಿ ಖರೀದಿಸಲು ಅನುಮತಿ ನೀಡಲಾಯಿತು ಹಾಗೂ ಉಪಕರಣಗಳ ಖರೀದಿಗೆ ಅವಶ್ಯವಿರುವ ಅನುದಾನವನ್ನು ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ಖಾತೆಯಲ್ಲಿ ಸಂಗ್ರಹವಾಗುವ ಅನುದಾನದಿಂದ ಭರಿಸಲು ಸರ್ವಾನುಮತದಿಂದ ಅನುಮತಿ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 10 | ರಿಮ್ಸ್ ವೈದ್ಯಕೀಯ ಕಾಲೇಜು ಹಾಗೂ ರಿಮ್ಸ್ ಭೋಧಕ ಆಸ್ಪತ್ರೆಯ ವಿವಿಧ ವಿಭಾಗಗಳಿಗೆ ಅವಶ್ಯವಿರುವ ಪೀಠೋಪಕರಣಗಳನ್ನು ನಿಯಮಾನುಸಾರ ಖರೀದಿಸಲು ಅನುಮತಿ ನೀಡುವ ಕುರಿತು. |

ರಿಮ್ಸ್ ಸಂಸ್ಥೆಯಲ್ಲಿ ವೈದ್ಯಕೀಯ ಸೀಟುಗಳನ್ನು 100 ರಿಂದ 150 ಕ್ಕೆ ಹೆಚ್ಚಳ ಮಾಡಿರುವುದರಿಂದ, ಪ್ರವೇಶಾತಿಗೆ ಅನುಗುಣವಾಗಿ ರಿಮ್ಸ್ ವೈದ್ಯಕೀಯ ಕಾಲೇಜು ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಯ ವಿವಿಧ ವಿಭಾಗಗಳಿಗೆ ಪೀಠೋಪಕರಣಗಳನ್ನು ನಿಯಮಾನುಸಾರ ಖರೀದಿಸಿ ಪೂರೈಸಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ ಸಂಬಂಧಪಟ್ಟ ವಿಭಾಗಗಳ ಮುಖ್ಯಸ್ಥರುಗಳು ಅವಶ್ಯವಿರುವ ಪೀಠೋಪಕರಣಗಳನ್ನು ಜರೂರಾಗಿ ಖರೀದಿಸಿ ಪೂರೈಸುವಂತೆ ಕೋರಿ ಮನವಿಯನ್ನು ರಿಮ್ಸ್ ಕಾರ್ಯಲಯಕ್ಕೆ ಸಲ್ಲಿಸಿರುತ್ತಾರೆ. ರಿಮ್ಸ್ ವೈದ್ಯಕೀಯ ಕಾಲೇಜು ಹಾಗೂ ರಿಮ್ಸ್ ಭೋಧಕ ಆಸ್ಪತ್ರೆಯ ವಿವಿಧ ವಿಭಾಗಗಳಿಗೆ ಪೀಠೋಪಕರಣಗಳನ್ನು ಖರೀದಿಸಲು ಅಂದಾಜು ರೂ. 1,22,08,300/– ಗಳಾಗುವ ಸಾಧ್ಯತೆಯಿರುತ್ತದೆ. ಆದರೆ ಪೀಠೋಪಕರಣಗಳನ್ನು ಖರೀದಿಸಲು ಅನುದಾನ ಲಭ್ಯವಿರುವುದಿಲ್ಲ.

ಕಾರಣ ರಿಮ್ಸ್ ವೈದ್ಯಕೀಯ ಕಾಲೇಜು ಹಾಗೂ ರಿಮ್ಸ್ ಭೋಧಕ ಆಸ್ಪತ್ರೆಯ ವಿವಿಧ ವಿಭಾಗಗಳಿಗೆ ಅವಶ್ಯವಿರುವ ಪೀಠೋಪಕರಣಗಳನ್ನು ನಿಯಮಸಾನುಸಾರ ಖರೀದಿಸಲು ಅನುಮತಿ ನೀಡುವ ಕುರಿತು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ವೈದ್ಯಕೀಯ ಕಾಲೇಜು ಹಾಗೂ ರಿಮ್ಸ್ ಭೋಧಕ ಆಸ್ಪತ್ರೆಯ ವಿವಿಧ ವಿಭಾಗಗಳಿಗೆ ಭಾರತೀಯ ವೈದ್ಯಕೀಯ ಮಂಡಳಿಯ ನಿಯಮದಂತೆ ಅವಶ್ಯವಿರುವ ಪೀಠೋಪಕರಣಗಳ ಕುರಿತು ಆರ್ಥಿಕ ಸಮಿತಿ ಸಭೆಯ ಗಮನಕ್ಕೆ ತರಲಾಯಿತು. ಆರ್ಥಿಕ ಸಮಿತಿ ಸಭೆಯು ಸದರಿ ಪೀಠೋಪಕರಣಗಳನ್ನು ಕೆ.ಟಿ.ಪಿ.ಪಿ ಕಾಯ್ದೆಯನ್ವಯ ನಿಯಮಾನುಸಾರ ಟೆಂಡರ್ ಆಹ್ವಾನಿಸಿ ಖರೀದಿಲು ಅನುಮತಿ ನೀಡಲಾಯಿತು ಹಾಗೂ ಇದಕ್ಕೆ ತಗುಲುವ ವೆಚ್ಚವನ್ನು ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದಲ್ಲಿ 60 : 40 ಅನುಪಾತದಲ್ಲಿ ಭರಿಸುವಂತೆ ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

(ಡಾ.ಕವಿತಾ ಪಾಟೀಲ್),
ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಜಾವೇದ್ ಅಖ್ತರ್), ಭಾ.ಆ.ಸೇ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ,
ಬೆಂಗಳೂರು

| ವಿಷಯ ಸೂಚಿ ಸಂಖ್ಯೆ – 11 | ರಿಮ್ಸ್ ಬೋಧಕ ಆಸ್ಪತ್ರೆಗೆ ಅತಿ ಅವಶ್ಯವಿರುವ ವೈದ್ಯಕೀಯ ಶಸ್ತ್ರಚಿಕಿತ್ಸಾ ಸಾಮಾಗ್ರಿಗಳನ್ನು ನಿಯಮಸಾರ ಖರೀದಿಸಲು ಅನುಮತಿ ನೀಡುವ ಕುರಿತು. |
|---|---|

ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆಯನ್ನು ನೆರವೇರಿಸಲು ವಿವಿಧ ಶಸ್ತ್ರ ಚಿಕಿತ್ಸಾ ಸಲಕರಣಗಳನ್ನು ಪೂರೈಸುವಂತೆ ಕೋರಿ ಅಂದಾಜು ಪಟ್ಟಿಯ ಸಮೇತ ವೈದ್ಯಕೀಯ ಅಧೀಕ್ಷಕರು, ರಿಮ್ಸ್ ಬೋದಕ ಆಸ್ಪತ್ರೆ, ರಾಯಚೂರು ಇವರು ದಿನಾಂಕ 10.12.2018 ರ ಪತ್ರದಲ್ಲಿ ಕೋರಿರುತ್ತಾರೆ. ಸದರಿ ಶಸ್ತ್ರಚಿಕಿತ್ಸಾ ಸಾಮಾಗ್ರಿಗಳನ್ನು ಖರೀದಿಸಲು ಅಂದಾಜು ರೂ. 7,93,06,700/– ಗಳಾಗುವ ಸಾಧ್ಯತೆಯಿರುತ್ತದೆ. ಆದರೆ ಸದರಿ ಶಸ್ತ್ರಚಿಕಿತ್ಸಾ ಸಾಮಾಗ್ರಿಗಳನ್ನು ಖರೀದಿಸಲು ಸಂಸ್ಥೆಯಲ್ಲಿ ಅನುದಾನ ಲಭ್ಯವಿರುವುದಿಲ್ಲ.

ಕಾರಣ ರಿಮ್ಸ್ ಬೋದಕ ಆಸ್ಪತ್ರೆಗೆ ರೋಗಿಗಳ ಚಿಕಿತ್ಸೆಯ ನಿಮಿತ್ತ ಅತಿ ಅವಶ್ಯವಿರುವ ವೈದ್ಯಕೀಯ ಶಸ್ತ್ರ ಚಿಕಿತ್ಸಾ ಸಾಮಾಗ್ರಿಗಳನ್ನು ನಿಯಮಸಾನುಸಾರ ಖರೀದಿಸಲು ಅನುಮತಿ ನೀಡುವ ಕುರಿತು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ರಿಮ್ಸ್ ಬೋದಕ ಆಸ್ಪತ್ರೆಗೆ ರೋಗಿಗಳ ಚಿಕಿತ್ಸೆಯ ನಿಮಿತ್ತ ಅತಿ ಅವಶ್ಯವಿರುವ ವೈದ್ಯಕೀಯ ಶಸ್ತ್ರ ಚಿಕಿತ್ಸಾ ಸಾಮಾಗ್ರಿಗಳನ್ನು ಖರೀದಿಸುವ ಸಂಬಂಧ ವಿಭಾಗದ ಮುಖ್ಯಸ್ಥರು ಸಲ್ಲಿಸುವ ಬೇಡಿಕೆ ಪತ್ರಗಳನ್ನು ಈ ಕೆಳಕಂಡಂತೆ ತಾಂತ್ರಿಕ ಸಮಿತಿಯನ್ನು ರಚಿಸಿಕೊಂಡು ತಾಂತ್ರಿಕ ಸಮಿತಿಯಲ್ಲಿ ರಿಮ್ಸ್ ಸಂಸ್ಥೆಯಲ್ಲಿ ಅನುದಾನದ ಲಭ್ಯತೆ, ಶಸ್ತ್ರಚಿಕಿತ್ಸಾ ಸಾಮಾಗ್ರಿಗಳ ಅತಿ ಅವಶ್ಯಕತೆ ಮತ್ತು ಭಾರತೀಯ ವೈದ್ಯಕೀಯ ಮಂಡಳಿಯ ನಿಯಮದನ್ವಯ ಅವಶ್ಯಕವೇ ಎಂಬುದರ ಬಗ್ಗೆ ಪರಿಶೀಲನೆ ಮಾಡಿಕೊಂಡು ತದನಂತರದಲ್ಲಿ ರಿಮ್ಸ್ ಸಂಸ್ಥೆಯಲ್ಲಿ ಈಗಾಗಲೇ ಸಲ್ಲಿಸಿರುವ ಪಟ್ಟಿಯಲ್ಲಿ ಅತಿ ಅವಶ್ಯಕ ಶಸ್ತ್ರಚಿಕಿತ್ಸಾ ಸಾಮಾಗ್ರಿಗಳನ್ನು ಪಟ್ಟಿ ಮಾಡಿಕೊಂಡು ತಾಂತ್ರಿಕ ಸಮಿತಿಯ ಅನುಮೋದನೆ ಪಡೆದ ನಂತರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಇ–ಟೆಂಡರ್ ಮೂಲಕ ನಿಯಮಾನುಸಾರ ಖರೀದಿಸಲು ಅನುಮತಿ ನೀಡಲಾಯಿತು ಹಾಗೂ ಶಸ್ತ್ರ ಚಿಕಿತ್ಸಾ ಸಾಮಾಗ್ರಿಗಳ ಖರೀದಿಗೆ ಅವಶ್ಯವಿರುವ ಅನುದಾನದ ಕುರಿತು ಸರ್ಕಾರಕ್ಕೆ ವಿವರವಾದ ಪ್ರಸ್ತಾವನೆಯನ್ನು ಸಲ್ಲಿಸಲು ಆರ್ಥಿಕ ಸಮಿತಿ ಸಭೆಯು ಸೂಚಿಸಲಾಯಿತು.

1) ನಿರ್ದೇಶಕರು, ರಿಮ್ಸ್, ರಾಯಚೂರು : ಅಧ್ಯಕ್ಷರು
2) ವೈದ್ಯಕೀಯ ಅಧೀಕ್ಷಕರು, ರಿಮ್ಸ್ ಬೋಧಕ ಆಸ್ಪತ್ರೆ, ರಾಯಚೂರು : ಸದಸ್ಯರು
3) ಸ್ಥಾನಿಕ ವೈದ್ಯಾಧಿಕಾರಿಗಳು, ರಿಮ್ಸ್ ಬೋದಕ ಆಸ್ಪತ್ರೆ, ರಾಯಚೂರು : ಸದಸ್ಯರು
4) ಆರ್ಥಿಕ ಸಲಹೆಗಾರರು, ರಿಮ್ಸ, ರಾಯಚೂರು : ಸದಸ್ಯರು
5) ಬಯೋಮೆಡಿಕಲ್ ಇಂಜಿನಿಯರ್, ರಿಮ್ಸ್ ರಾಯಚೂರು : ಸದಸ್ಯರು
6) ವಿಷಯ ಪರಿಣಿತರು : ಸದಸ್ಯರು
(ವೈದ್ಯಶಾಸ್ತ್ರ ವಿಭಾಗ, ಶಸ್ತ್ರಚಿಕಿತ್ಸಾ ವಿಭಾಗ, ಎಲುಬು ಮತ್ತು ಕೀಲು ವಿಭಾಗ ಹಾಗೂ ಇಎನ್‌ಟಿ ವಿಭಾಗ)

| ವಿಷಯ ಸೂಚಿ ಸಂಖ್ಯೆ – 12 | ರಿಮ್ಸ್ ಬೋಧಕ ಆಸ್ಪತ್ರೆಯ ಆವರಣದಲ್ಲಿರುವ ಕ್ಯಾಂಟೀನ್‌ಗೆ ಹೊಸದಾಗಿ ಟೆಂಡರ್ ಆಹ್ವಾನಿಸಲು ಅನುಮತಿ ನೀಡುವ ಕುರಿತು. |
|---|---|

ರಿಮ್ಸ್ ಬೋಧಕ ಆಸ್ಪತ್ರೆಯ ಆವರಣದಲ್ಲಿ ನೂತನ ಕ್ಯಾಂಟೀನ್ ಕಟ್ಟಡವನ್ನು ನಿರ್ಮಾಣ ಮಾಡಲಾಗಿದ್ದು, ಪ್ರಸ್ತುತ ಮೆ॥ ಮಾರುತಿ ಏಜೆನ್ಸಿಸ್, ರಾಯಚೂರು ಇವರಿಗೆ ಕ್ಯಾಂಟೀನ್ ನಿರ್ವಹಣೆಯನ್ನು ನೀಡಲಾಗಿರುತ್ತದೆ. ಮೆ॥ ಮಾರುತಿ ಏಜೆನ್ಸಿಸ್, ರಾಯಚೂರು ಇವರಿಗೆ ನೀಡಲಾದ ಟೆಂಡರ್ ಅವಧಿಯು ಮುಕ್ತಾಯಗೊಂಡಿರುವುದರಿಂದ, ಚಿಕಿತ್ಸೆಗಾಗಿ ಆಸ್ಪತ್ರೆಗೆ ಬರುವ ರೋಗಿಗಳಿಗೆ, ಸಾರ್ವಜನಿಕರಿಗೆ, ಸಿಬ್ಬಂದಿಗಳಿಗೆ ಯಾವುದೇ ರೀತಿ ತೊಂದರೆಯಾಗದಂತೆ ಮೆ॥ ಮಾರುತಿ ಏಜೆನ್ಸಿಸ್, ರಾಯಚೂರು ಇವರನ್ನು ಟೆಂಡರ್ ಇತ್ಯರ್ಥವಾಗುವವರೆಗೆ ಮುಂದುವರೆಸಲಾಗಿರುತ್ತದೆ.

| | |
|---|---|
| (ಡಾ.ಕವಿತಾ ಪಾಟೀಲ್), | (ಜಾವೇದ್ ಅಖ್ತರ್), ಭಾ.ಆ.ಸೇ, |
| ನಿರ್ದೇಶಕರು, | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, |
| ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, |
| ರಾಯಚೂರು | ಬೆಂಗಳೂರು |

ಕಾರಣ ನೂತನ ಬೋಧಕ ಆಸ್ಪತ್ರೆಯ ಆವರಣದಲ್ಲಿರುವ ನೂತನ ಕ್ಯಾಂಟೀನ್‌ಗೆ ನಿಯಮಾನುಸಾರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಆಹ್ವಾನಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ಬೋಧಕ ಆಸ್ಪತ್ರೆಯ ಆವರಣದಲ್ಲಿರುವ ನೂತನ ಕ್ಯಾಂಟೀನ್‌ಗೆ ನಿಯಮಾನುಸಾರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ 30 ದಿನಗಳ ಕಾಲಾವಕಾಶ ನೀಡಿ ಟೆಂಡರ್ ಆಹ್ವಾನಿಸಲು ಈ ಕೆಳಕಂಡ ಅಂಶಗಳೊಂದಿಗೆ ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

1) ಕ್ಯಾಂಟೀನ್‌ಗೆ ಸಂಬಂಧಿಸಿದ ದರಗಳನ್ನು ಸಂಸ್ಥೆಯೇ ನಿಗದಿಪಡಿಸತಕ್ಕದ್ದು.
2) ಕ್ಯಾಂಟೀನ್ ಅವಧಿಯನ್ನು 03 ವರ್ಷಗಳಿಗೆ ನಿಗದಿಪಡಿಸುವುದು.
3) ಆಸ್ಪತ್ರೆ ಮತು ಕ್ಯಾಂಟೀನ್ ಆವರಣದ ಸುತ್ತಮುತ್ತ ಸ್ವಚ್ಚತೆಯನ್ನು ಕಾಪಾಡಿಕೊಳ್ಳುವುದು.
4) ಕ್ಯಾಂಟೀನ್‌ನಲ್ಲಿ ಪ್ಲಾಸ್ಟೀಕ್ ಸಾಮಾಗ್ರಿಗಳನ್ನು ನಿಷೇಧಿಸುವುದು.
5) ಕ್ಯಾಂಟೀನ್‌ಗೆ ಸಂಬಂಧಿಸಿದ ನೀರು ಮತ್ತು ವಿದ್ಯುತ್‌ನ ವೆಚ್ಚವನ್ನು ಟೆಂಡರ್‌ದಾರರೇ ಭರಿಸುವುದು

| | |
|---|---|
| ವಿಷಯ ಸೂಚಿ ಸಂಖ್ಯೆ – 13 | ರಿಮ್ಸ್ ಬೋಧಕ ಆಸ್ಪತ್ರೆಯ ಡಯಟ್ ವಿಭಾಗದ ಅಡುಗೆ ಕೋಣೆಗೆ ಅವಶ್ಯವಿರುವ ಅಡುಗೆ ಸಾಮಾಗ್ರಿಗಳನ್ನು ನಿಯಮಾನುಸಾರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಖರೀದಿಸಲು ಅನುಮತಿ ನೀಡುವ ಬಗ್ಗೆ. |

ರಿಮ್ಸ್ ಬೋಧಕ ಆಸ್ಪತ್ರೆಯ ಡಯಟ್ ವಿಭಾಗಗಕ್ಕೆ ದಿನನಿತ್ಯದ ಉಪಯೋಗಕ್ಕಾಗಿ ಈ ಕೆಳಕಂಡ ಅಡುಗೆ ಸಾಮಾನುಗಳು ಅವಶ್ಯಕವಾಗಿ ಪೂರೈಸಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ ವೈದ್ಯಕೀಯ ಅಧೀಕ್ಷಕರು, ರಿಮ್ಸ್ ಬೋಧಕ ಆಸ್ಪತ್ರೆ, ರಾಯಚೂರು ಇವರು ರಿಮ್ಸ್ ಬೋಧಕ ಆಸ್ಪತ್ರೆಯ ಅಡುಗೆ ಕೋಣೆಗೆ ಅವಶ್ಯವಿರುವ ಅಡುಗೆ ಸಾಮಾಗ್ರಿಗಳನ್ನು ಪೂರೈಸುವಂತೆ ಕೋರಿ ಮನವಿಯನ್ನು ರಿಮ್ಸ್ ಕಾರ್ಯಾಲಯಕ್ಕೆ ದಿನಾಂಕ 10.12.2018 ರಂದು ಸಲ್ಲಿಸಿರುತ್ತಾರೆ. ಸದರಿ ಅಡುಗೆ ಸಾಮಾಗ್ರಿಗಳನ್ನು ಖರೀದಿಸಲು ಅಂದಾಜು ರೂ. 6,87,700/- ಗಳಾಗುವ ಸಾಧ್ಯತೆಯಿರುತ್ತದೆ. ಸದರಿ ಅಡುಗೆ ಸಾಮಾನುಗಳನ್ನು ಖರೀದಿಸಲು ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆ ದಾರರ ಖಾತೆ ಸಂಖ್ಯೆ 62334775412 ದಲ್ಲಿ ಅನುದಾನ ಲಭ್ಯವಿರುತ್ತದೆ.

ಕಾರಣ ರಿಮ್ಸ್ ಬೋಧಕ ಆಸ್ಪತ್ರೆಯ ಡಯಟ್ ವಿಭಾಗದ ಅಡುಗೆ ಕೋಣೆಗೆ ಅವಶ್ಯವಿರುವ ಅಡುಗೆ ಸಾಮಾಗ್ರಿಗಳನ್ನು ನಿಯಮಾನುಸಾರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಖರೀದಿಸಲು ಅನುಮತಿ ನೀಡುವ ಬಗ್ಗೆ ಹಾಗೂ ಈ ವೆಚ್ಚವನ್ನ ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ಖಾತೆಯಲ್ಲಿ ಸಂಗ್ರಹವಾಗಿರುವ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ಬೋಧಕ ಆಸ್ಪತ್ರೆಯ ಡಯಟ್ ವಿಭಾಗದ ಅಡುಗೆ ಕೋಣೆಗೆ ಅವಶ್ಯವಿರುವ ಅಡುಗೆ ಸಾಮಾಗ್ರಿಗಳನ್ನು ನಿಯಮಾನುಸಾರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಇ-ಟೆಂಡರ್ ಮೂಲಕ 30 ದಿನಗಳ ಕಾಲಾವಕಾಶ ನೀಡಿ ಖರೀದಿಸಲು ಅನುಮತಿ ನೀಡಲಾಯಿತು ಹಾಗೂ ಈ ವೆಚ್ಚವನ್ನ ರಿಮ್ಸ್ ಬೋಧಕ ಆಸ್ಪತ್ರೆಯ ಬಳಕೆದಾರರ ಖಾತೆಯಲ್ಲಿ ಸಂಗ್ರಹವಾಗಿರುವ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

(ಡಾ.ಕವಿತಾ ಪಾಟೀಲ್),
ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಜಾವೇದ್ ಅಖ್ತರ್), ಭಾ.ಆ.ಸೇ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ,
ಬೆಂಗಳೂರು

| ವಿಷಯ ಸೂಚಿ ಸಂಖ್ಯೆ – 14 | ರಿಮ್ಸ್ ಸಂಸ್ಥೆಯ ಆಡಳಿತ ಕಚೇರಿ, ರಿಮ್ಸ್ ಕೇಂದ್ರ ಗ್ರಂಥಾಲಯ, ಪರೀಕ್ಷಾ ಕೊಠಡಿಗೆ ಅವಶ್ಯವಿರುವ 02 ಜೆರಾಕ್ಸ್ ಯಂತ್ರಗಳನ್ನ ಖರೀದಿಸಲು ಅನುಮತಿ ನೀಡುವ ಬಗ್ಗೆ. |
|---|---|

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆಡಳಿತ ಕಚೇರಿಯಲ್ಲಿ ಪ್ರಸ್ತುತ ಒಂದು ಸಣ್ಣ ಜೆರಾಕ್ಸ್ ಯಂತ್ರ ಲಭ್ಯವಿದ್ದು, ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದಿಂದ ಜರುಗಿಸಲಾಗುವ ಪರೀಕ್ಷೆಗಳ ಸಮಯದಲ್ಲಿ ಪರೀಕ್ಷಾ ಕೊಠಡಿಗೆ ಜೆರಾಕ್ಸ್ ಯಂತ್ರವನ್ನು ಸ್ಥಳಾಂತರಿಸಲಾಗುತ್ತದೆ. ಇದರಿಂದಾಗಿ ಆ ಸಮಯದಲ್ಲಿ ಸರ್ಕಾರದ ಹಂತದಲ್ಲಿ ಜರುಗುವ ಸಭೆಗಳಿಗೆ ಮಾಹಿತಿಯನ್ನು ಒದಗಿಸಲು ತುಂಬಾ ತೊಂದರೆಯಾಗುತ್ತದೆ. ಅಲ್ಲದೇ ಪರೀಕ್ಷೆಗಳು ಜರುಗುವ ಸಮಯದಲ್ಲಿ ಪರೀಕ್ಷಾ ಕೊಠಡಿಗೆ ಜೆರಾಕ್ಸ್ ಮಾಡಲು ಬರುವುದಿಲ್ಲ. ಇದು ನಿಷಿದ್ದವಾಗಿರುತ್ತದೆ.

ಅದೇ ರೀತಿ ಕಾರ್ಯದರ್ಶಿಗಳು, ರಿಮ್ಸ್ ಕೇಂದ್ರ ಗ್ರಂಥಾಲಯ ಸಮಿತಿ, ರಾಯಚೂರು ಇವರು ರಿಮ್ಸ ಕೇಂದ್ರ ಗ್ರಂಥಾಲಯದಲ್ಲಿ ಜೆರಾಕ್ಸ್ ಯಂತ್ರವು ಇರದೇ ಇರುವುದರಿಂದ ತೊಂದರೆ ಉಂಟಾಗುತ್ತಿದ್ದು, ದೈನಂದಿನ ಕೆಲಸ ಕಾರ್ಯಗಳಿಗೆ ಅನುಕೂಲವಾಗುವಂತೆ ಒಂದು ಜೆರಾಕ್ಸ್ ಯಂತ್ರವನ್ನು ಪೂರೈಸುವಂತೆ ಕೋರಿರುತ್ತಾರೆ.

ಈ ಹಿನ್ನಲೆಯಲ್ಲಿ ಪ್ರಸ್ತುತ ರಿಮ್ಸ ಆಡಳಿತ ಕಚೇರಿಯಲ್ಲಿರುವ ಜೆರಾಕ್ಸ್ ಯಂತ್ರವನ್ನು ರಿಮ್ಸ್ ಕೇಂದ್ರ ಗ್ರಂಥಾಲಯಕ್ಕೆ ನೀಡಿ, ರಿಮ್ಸ್ ಆಡಳಿತ ಕಚೇರಿ ಹಾಗೂ ರಿಮ್ಸ್ ಪರೀಕ್ಷಾ ಕೊಠಡಿಗೆ ಸಾಮಾರ್ಥ್ಯಕ್ಕೆ ಅನುಗುಣವಾಗಿ ಹೊಸದಾಗಿ 02 ಜೆರಾಕ್ಸ್ ಯಂತ್ರಗಳನ್ನು ಖರೀದಿಸುವುದು ಅತಿ ಅವಶ್ಯಕವಾಗಿರುತ್ತದೆ. ಸದರಿ 02 ಜೆರಾಕ್ಸ್ ಯಂತ್ರಗಳನ್ನು ಖರೀದಿಸಲು ರಿಮ್ಸ್ ಸಂಸ್ಥೆಯ ನಿರ್ವಹಣಾ ಖಾತೆ ಸಂಖ್ಯೆ. 62129977456 ರಲ್ಲಿ ಅನುದಾನ ಲಭ್ಯವಿರುತ್ತದೆ.

ಕಾರಣ ರಿಮ್ಸ್ ಆಡಳಿತ ಕಚೇರಿ ಹಾಗೂ ರಿಮ್ಸ್ ಪರೀಕ್ಷಾ ಕೊಠಡಿಗೆ ಸಾಮಾರ್ಥ್ಯಕ್ಕೆ ಅನುಗುಣವಾಗಿ ಹೊಸದಾಗಿ 02 ಜೆರಾಕ್ಸ್ ಯಂತ್ರಗಳನ್ನು ನಿಯಮಾನುಸಾರ ಖರೀದಿಸಲು ಹಾಗೂ ಈ ವೆಚ್ಚವನ್ನು ರಿಮ್ಸ್ ಸಂಸ್ಥೆಯ ನಿರ್ವಹಣಾ ಖಾತೆ ಸಂಖ್ಯೆ. 62129977456 ರ ಮುಖಾಂತರ ಭರಿಸುವ ಬಗ್ಗೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ಆಡಳಿತ ಕಚೇರಿ ಹಾಗೂ ರಿಮ್ಸ್ ಪರೀಕ್ಷಾ ಕೊಠಡಿಗೆ ಸಾಮಾರ್ಥ್ಯಕ್ಕೆ ಅನುಗುಣವಾಗಿ ಅವಶ್ಯವಿರುವ 02 ಜೆರಾಕ್ಸ್ ಯಂತ್ರಗಳನ್ನು ನಿಯಮಾನುಸಾರ ಖರೀದಿಸಲು ಅನುಮತಿ ನೀಡಲಾಯಿತು ಹಾಗೂ ಈ ವೆಚ್ಚವನ್ನು ರಿಮ್ಸ್ ಸಂಸ್ಥೆಯ ನಿರ್ವಹಣಾ ಖಾತೆ ಸಂಖ್ಯೆ 62129977456 ರಲ್ಲಿ ಸಂಗ್ರಹವಾಗಿರುವ ಅನುದಾನದಿಂದ ಭರಿಸಲು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| ವಿಷಯ ಸೂಚಿ ಸಂಖ್ಯೆ – 15 | ರಿಮ್ಸ್ ಸಂಸ್ಥೆಯ ಆವರಣದಲ್ಲಿನ ವಸತಿ ನಿಲಯಗಳು, ಸಿಬ್ಬಂದಿ ವಸತಿ ಸಮುಚ್ಚಯಗಳು ಹಾಗೂ ರಿಮ್ಸ ಬೋಧಕ ಆಸ್ಪತ್ರೆಯಲ್ಲಿರುವ ಸೋಲಾರ್ ವಾಟರ್ ಹೀಟರ್‌ಗಳನ್ನು ದುರಸ್ಥಿಗೊಳಿಸಲು ಮತ್ತು ಆಸ್ಪತ್ರೆಯಲ್ಲಿನ ವಾರ್ಡ್‌ಗಳಿಗೆ ಪ್ರತ್ಯೇಕ ಪೈಪ್ ಲೈನ್ ಅಳವಡಿಸಲು ಅನುಮತಿ ನೀಡುವ ಕುರಿತು. |
|---|---|

ರಿಮ್ಸ್ ಸಂಸ್ಥೆಯ ಆವರಣದಲ್ಲಿರುವ ವಿದ್ಯಾರ್ಥಿಗಳ ವಸತಿ ನಿಲಯಗಳು, ಸಿಬ್ಬಂದಿ ವಸತಿ ಸಮುಚ್ಚಯಗಳು ಹಾಗೂ ರಿಮ್ಸ ಬೋಧಕ ಆಸ್ಪತ್ರೆಯ ವಾರ್ಡ್‌ಗಳಿಗೆ ಬಿಸಿ ನೀರು ಸರಬರಾಜಗಾಗಿ ಸೋಲಾರ್ ವಾಟರ್ ಹೀಟರ್‌ಗಳನ್ನು ಅಳವಡಿಸಲಾಗಿರುತ್ತದೆ. ಸದರಿ ವಾಟರ್ ಹೀಟರ್‌ಗಳನ್ನು ಅಳವಡಿಸಿ ಸುಮಾರು 06 ವರ್ಷಗಳಾಗಿರುವುದರಿಂದ, ಸೋಲಾರ್ ವಾಟರ್ ಹೀಟರ್‌ಗಳು ದುರಸ್ಥಿಗೆ ಬಂದಿರುತ್ತವೆ. ಮತ್ತು ಆಸ್ಪತ್ರೆಯಲ್ಲಿನ ವಾರ್ಡ್‌ಗಳಲ್ಲಿರುವ ಗೀಜರ್‌ಗಳಿಗೆ ಸೋಲಾರ್ ವಾಟರ್ ಹೀಟರ್‌ಗಳ ಸಂಪರ್ಕವನ್ನು ಕಲ್ಪಿಸಲಾಗಿದ್ದು, ಸದರಿ ಸಂಪರ್ಕವನ್ನು ರದ್ದುಗೊಳಿಸಿ, ನೇರವಾಗಿ ಬಿಸಿ ನೀರಿನ ಸಂಪರ್ಕವನ್ನು ಕಲ್ಪಿಸಲು ವಾರ್ಡ್‌ಗಳಿಗೆ ಪ್ರತ್ಯೇಕ ಪೈಪ್‌ಲೈನನ್ನು ಅಳವಡಿಸಬೇಕಾಗಿರುತ್ತದೆ.

| | |
|---|---|
| (ಡಾ.ಕವಿತಾ ಪಾಟೀಲ್), | (ಜಾವೇದ್ ಅಖ್ತರ್), ಭಾ.ಆ.ಸೇ, |
| ನಿರ್ದೇಶಕರು, | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, |
| ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, |
| ರಾಯಚೂರು | ಬೆಂಗಳೂರು |

ಕಾರಣ ರಿಮ್ಸ್ ಸಂಸ್ಥೆಯ ಆವರಣದಲ್ಲಿನ ವಸತಿ ನಿಲಯಗಳು, ಸಿಬ್ಬಂದಿ ವಸತಿ ಸಮುಚ್ಚಯಗಳು ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ದುರಸ್ಥಿಯಲ್ಲಿರುವ ಸೋಲಾರ್ ವಾಟರ್ ಹೀಟರ್‌ಗಳನ್ನು ದುರಸ್ಥಿಗೊಳಿಸಲು ಮತ್ತು ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿನ ವಾರ್ಡ್‌ಗಳಿಗೆ ಬಿಸಿ ನೀರಿನ ಸಂಪರ್ಕವನ್ನು ನೇರವಾಗಿ ಕಲ್ಪಿಸಲು ಆರ್ಥಿಕ ಸಮಿತಿ ಸಭೆಯ ಮಾರ್ಗದರ್ಶನ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ಸಂಸ್ಥೆಯ ಆವರಣದಲ್ಲಿನ ವಸತಿ ನಿಲಯಗಳು, ಸಿಬ್ಬಂದಿ ವಸತಿ ಸಮುಚ್ಚಯಗಳು ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ದುರಸ್ಥಿಯಲ್ಲಿರುವ ಸೋಲಾರ್ ವಾಟರ್ ಹೀಟರ್‌ಗಳನ್ನು ದುರಸ್ಥಿಗೊಳಿಸಲು ಆರ್ಥಿಕ ಸಮಿತಿ ಸಭೆಯ ಮುಂದೆ ಅಂದಾಜು ಪಟ್ಟಿಯನ್ನು ಸಲ್ಲಿಸದೇ ಇರುವುದರಿಂದ, ಸದರಿ ಸೋಲಾರ್ ವಾಟರ್ ಹೀಟರ್‌ಗಳನ್ನು ದುರಸ್ಥಿ ಮಾಡಿಸುವ ಸಂಬಂಧ ವಿವರವಾದ ಅಂದಾಜು ಪಟ್ಟಿಯನ್ನು ಪಡೆದು ಮುಂದಿನ ಆರ್ಥಿಕ ಸಮಿತಿ ಸಭೆಯ ಮುಂದೆ ಮಂಡಿಸಲು ಸೂಚಿಸಲಾಯಿತು.

ಅದೇ ರೀತಿ ಸೋಲಾರ್ ವಾಟರ್ ಹೀಟರ್‌ಗಳ ದುರಸ್ಥಿಯ ನಂತರ ಎ.ಎಂ.ಸಿ ಅಥವಾ ಸಿ.ಎಂ.ಸಿ ನೀಡುವ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. ಹಾಗೂ ಇದಕ್ಕೆ ತಗುಲುವ ವೆಚ್ಚವನ್ನು ರಿಮ್ಸ್ ಸಂಸ್ಥೆಯ ನಿರ್ವಹಣಾ ಖಾತೆ ಸಂಖ್ಯೆ. 62129977456 ರಲ್ಲಿ ಸಂಗ್ರಹವಾಗಿರುವ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 16 | ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಡಯಾಲಿಸಿಸ್ ವಿಭಾಗಗಕ್ಕೆ 2019–20 ನೇ ಸಾಲಿಗಾಗಿ ಅವಶ್ಯವಿರುವ ಪರಿಕರಗಳನ್ನು ನಿಯಮಾನುಸಾರ ಖರೀಧಿಸಲು ಅನುಮತಿ ನೀಡುವ ಬಗ್ಗೆ. |

ವಿಶೇಷಾಧಿಕಾರಿಗಳು, ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು ಇವರು ದಿನಾಂಕ 01.12.2018 ರ ಪತ್ರದಲ್ಲಿ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಡಯಾಲಿಸಿಸ್ ವಿಭಾಗಗಕ್ಕೆ 2019–20 ನೇ ಸಾಲಿಗಾಗಿ ಅವಶ್ಯವಿರುವ ಪರಿಕರಗಳನ್ನು ನಿಯಮಾನುಸಾರ ಖರೀಧಿಸಲು ಪೂರೈಸುವಂತೆ ಬೇಡಿಕೆ ಪತ್ರವನ್ನು ಸಲ್ಲಿಸಿರುತ್ತಾರೆ. ಸದರಿ ಡಯಾಲಿಸಿಸ್ ಪರಿಕರಗಳನ್ನು ಖರೀದಿಸಲು ಅಂದಾಜು ರೂ. 62,98,500/– ಗಳು ಆಗುವ ಸಾಧ್ಯತೆಯಿರುತ್ತದೆ. ಸದರಿ ಪರಿಕರಗಳನ್ನು ಖರೀದಿಸಲು ಓಪೆಕ್ ಆಸ್ಪತ್ರೆಯ ಖಾತೆ ಸಂಖ್ಯೆ. 622 48955822 ನಲ್ಲಿ ಅನುದಾನ ಲಭ್ಯವಿರುತ್ತದೆ.

ಕಾರಣ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಡಯಾಲಿಸಿಸ್ ವಿಭಾಗಗಕ್ಕೆ 2019–20 ನೇ ಸಾಲಿಗಾಗಿ ಅವಶ್ಯವಿರುವ ಪರಿಕರಗಳನ್ನು ನಿಯಮಾನುಸಾರ ಖರೀಧಿಸಲು ಟೆಂಡರ್ ಆಹ್ವಾನಿಸುವ ಬಗ್ಗೆ ಹಾಗೂ ಈ ವೆಚ್ಚವನ್ನು ಓಪೆಕ್ ಆಸ್ಪತ್ರೆಯ ಖಾತೆ ಸಂಖ್ಯೆ. 62248955822 ನಿಂದ ಭರಿಸುವ ಬಗ್ಗೆ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಡಯಾಲಿಸಿಸ್ ವಿಭಾಗಗಕ್ಕೆ 2019–20ನೇ ಸಾಲಿಗೆ ಅವಶ್ಯವಿರುವ ಪರಿಕರಗಳನ್ನು ನಿಯಮಾನುಸಾರ ಕೆ.ಟಿ.ಪಿ.ಪಿ ಕಾಯ್ದೆಯನ್ವಯ 30 ದಿನಗಳ ಕಾಲಾವಕಾಶ ನೀಡಿ ಇ–ಟೆಂಡರ್ ಮೂಲಕ ಖರೀದಿಸಲು ಅನುಮತಿ ನೀಡಲಾಯಿತು. ಹಾಗೂ ಈ ವೆಚ್ಚವನ್ನು ಓಪೆಕ್ ಆಸ್ಪತ್ರೆಯ ಲೆಕ್ಕಶೀರ್ಷಿಕೆ 2210–01–110–2–37 ಅಡಿಯಲ್ಲಿ ಭರಿಸಲು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| | |
|---|---|
| (ಡಾ.ಕವಿತಾ ಪಾಟೀಲ್), | (ಜಾವೇದ್ ಅಖ್ತರ್), ಭಾ.ಆ.ಸೇ, |
| ನಿರ್ದೇಶಕರು, | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, |
| ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, |
| ರಾಯಚೂರು | ಬೆಂಗಳೂರು |

| | |
|---|---|
| ವಿಷಯ ಸೂಚಿ ಸಂಖ್ಯೆ – 17 | ರಿಮ್ಸ್ ವೈದ್ಯಕೀಯ ಕಾಲೇಜು, ರಿಮ್ಸ್ ಬೋಧಕ ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಉತ್ಪತ್ತಿಯಾಗುವ ಘನ ತ್ಯಾಜ್ಯ ವಸ್ತುಗಳ ವಿಲೇವಾರಿಗಾಗಿ ನಿಯಮಾನುಸಾರ ಸರ್ವಿಸ್ ಕಾಂಟ್ರಾಕ್ಟ್ ನೀಡಲು ಅನುಮತಿ ನೀಡುವ ಕುರಿತು. |

ರಿಮ್ಸ್ ವೈದ್ಯಕೀಯ ಕಾಲೇಜು, ರಿಮ್ಸ್ ಬೋಧಕ ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಪ್ರತಿನಿತ್ಯ ಸುಮಾರು 100 ಕೆಜಿ ಗಿಂತಲೂ ಅಧಿಕವಾಗಿ ಘನ ತ್ಯಾಜ್ಯ ವಸ್ತುಗಳು ಉತ್ಪತ್ತಿಯಾಗುತ್ತಿದ್ದು, ಕೇಂದ್ರ ಸರ್ಕಾರದ ಘನ ಮತ್ತು ದ್ರವ ತ್ಯಾಜ್ಯ ವಸ್ತುಗಳ ವಿಲೇವಾರಿ ಕಾಯ್ದೆ – 2016 ರನ್ವಯ ಹೆಚ್ಚು ಘನ ಮತ್ತು ದ್ರವ ತ್ಯಾಜ್ಯ ಉತ್ಪಾದಿಸುವ ಸಂಸ್ಥೆಯವರು ಆಯಾ ತ್ಯಾಜ್ಯಗಳನ್ನು ವಿಲೇವಾರಿ ಮಾಡುವಂತೆ ಸೂಚಿಸಿರುತ್ತಾರೆ. ರಿಮ್ಸ್ ವೈದ್ಯಕೀಯ ಕಾಲೇಜು, ರಿಮ್ಸ್ ಬೋಧಕ ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯು ಈ ನಿಯಮಕ್ಕೆ ಒಳಪಡುವುದರಿಂದ ಆಸ್ಪತ್ರೆಯಲ್ಲಿ ಉತ್ಪಾದನೆಯಾಗುವ ಘನ ಮತ್ತು ದ್ರವ ತ್ಯಾಜ್ಯ ವಸ್ತುಗಳ ವಿಲೇವಾರಿಯನ್ನು ಸಂಸ್ಥೆಯಿಂದ ನಿರ್ವಹಿಸುವುದು ಅವಶ್ಯವಾಗಿರುತ್ತದೆ.

ಸಂಸ್ಥೆಯ ವತಿಯಿಂದ ಈ ನಿಯಮವನ್ನು ಅನುಸರಿಸಿದಲ್ಲಿ ಪ್ರತ್ಯೇಕವಾಗಿ ಲಾರಿ ವಾಹನ, ವಾಹನ ಚಾಲಕರು, ಕೆಲಸಗಾರರನ್ನು ನಿರ್ವಹಣೆ ಮಾಡಬೇಕಾಗುತ್ತದೆ. ಇದರ ಬದಲಾಗಿ ಸರ್ವಿಸ್ ಕಾಂಟ್ರಾಕ್ಟ್ ನೀಡಿದಲ್ಲಿ ಹೆಚ್ಚಿನ ಆರ್ಥಿಕ ಹೊರೆಯಾಗುವುದಿಲ್ಲ. ಮತ್ತು ದಿನ ನಿತ್ಯ ಘನ ದ್ರವ ತ್ಯಾಜ್ಯ ವಸ್ತುಗಳನ್ನು ಸುಗಮವಾಗಿ ವಿಲೇವಾರಿ ಮಾಡಬಹುದಾಗಿರುತ್ತದೆ.

ರಿಮ್ಸ್ ವೈದ್ಯಕೀಯ ಕಾಲೇಜು, ರಿಮ್ಸ್ ಬೋಧಕ ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಉತ್ಪತ್ತಿಯಾಗುವ ಘನ ತ್ಯಾಜ್ಯ ವಸ್ತುಗಳ ವಿಲೇವಾರಿಗಾಗಿ ನಿಯಮಾನುಸಾರ ಸರ್ವಿಸ್ ಕಾಂಟ್ರಾಕ್ಟ್ ನೀಡಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ಬಯೋಮೆಡಿಕಲ್ ಕಾಯ್ದೆ 2016 ರನ್ವಯ ರಿಮ್ಸ್ ವೈದ್ಯಕೀಯ ಕಾಲೇಜು, ರಿಮ್ಸ್ ಬೋಧಕ ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಉತ್ಪತ್ತಿಯಾಗುವ ಘನ ತ್ಯಾಜ್ಯ ವಸ್ತುಗಳ ವಿಲೇವಾರಿಗಾಗಿ ನಿಯಮಾನುಸಾರ ಸರ್ವಿಸ್ ಕಾಂಟ್ರಾಕ್ಟ್ ನೀಡಲು ಆರ್ಥಿಕ ಸಮಿತಿ ಸಭೆಯು ಪರಿಶೀಲಿಸಿ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 18 | ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಎನ್.ಎ.ಬಿ.ಹೆಚ್ ನಿಂದ ಕೋ– ಆರ್ಡಿನೇಟರ್‌ನ್ನು ಸೇವೆಯನ್ನು ಪಡೆಯುವ ಬಗ್ಗೆ. |

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಸರ್ಕಾರದ ಆರೋಗ್ಯ ಯೋಜನೆಗಳನ್ನು ಅನುಷ್ಠಾನಗೊಳಿಸಲು ಎನ್.ಎ.ಬಿ.ಹೆಚ್ ನಿಂದ ಅನುಮತಿ ಪಡೆಯುವುದು ಅವಶ್ಯಕವಾಗಿರುತ್ತದೆ. ಈ ಸಂಬಂಧವಾಗಿ ಎಲ್ಲಾ ದಾಖಲೆಗಳನ್ನು ಅಪ್‌ಲೋಡ್ ಮಾಡಲಾಗಿರುತ್ತದೆ. ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಎನ್.ಎ.ಬಿ.ಹೆಚ್‌ಗೆ **(National Accreditation Board of Hospital)** ಸಂಬಂಧಿಸಿದಂತೆ ಯಾರಿಗೂ ತರಬೇತಿ / ಮಾಹಿತಿ ಇರುವುದಿಲ್ಲ. ಈ ಹಿನ್ನೆಲೆಯಲ್ಲಿ ಎನ್.ಎ.ಬಿ.ಹೆಚ್ ಕೋ–ಆರ್ಡಿನೇಟರ್ ಸಹಾಯ ಪಡೆಯುವುದು ಅವಶ್ಯವಾಗಿರುತ್ತದೆ. ಎನ್.ಎ.ಬಿ.ಹೆಚ್ ಕೋ–ಆರ್ಡಿನೇಟರ್ ಸಹಾಯವನ್ನು ಪಡೆದಲ್ಲಿ ಆಸ್ಪತ್ರೆಯ ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡುತ್ತಾರೆ, ನೂತನ ಯೋಜನೆಗಳನ್ನು ಅನುಷ್ಠಾನಗೊಳಿಸಲು ಅವರೇ ದಾಖಲೆಗಳನ್ನು ಸಿದ್ಧಪಡಿಸುತ್ತಾರೆ.

| | |
|---|---|
| (ಡಾ.ಕವಿತಾ ಪಾಟೀಲ್), | (ಜಾವೇದ್ ಅಖ್ತರ್), ಭಾ.ಆ.ಸೇ, |
| ನಿರ್ದೇಶಕರು, | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, |
| ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, |
| ರಾಯಚೂರು | ಬೆಂಗಳೂರು |

ಮತ್ತು ಈ ವಿಷಯಕ್ಕೆ ಸಂಬಂಧಿಸಿದಂತೆ ಏನಾದರೂ ಲೋಪದೋಷಗಳು ಇದ್ದಲ್ಲಿ ಅವರೇ ಸರಿಪಡಿಸುತ್ತಾರೆ. ಆದರೆ ಎನ್.ಎ.ಬಿ.ಹೆಚ್ ಕೋ– ಆರ್ಡಿನೇಟರ್ ಇವರಿಗೆ ಒಟ್ಟು ರೂ. 3,00,000/– ಗಳನ್ನು ಈ ಕೆಳಗಿನಂತೆ ಪಾವತಿಸಬೇಕಾಗಿರುತ್ತದೆ. ಮೆ॥ **Bussiness Services India** ಇವರು ಈ ಕೆಳಗಿನ ದರದಂತೆ ಕೋ– ಆರ್ಡಿನೇಟರ್ ಆಗಿ ನಿರ್ವಹಿಸಲು ಒಪ್ಪಿಗೆಯನ್ನು ಸೂಚಿಸಿರುತ್ತಾರೆ.

1) ರೂ. 50,000/–ಗಳನ್ನು ಆಸ್ಪತ್ರೆಗೆ ಮೊದಲನೇ ಬಾರಿ ಭೇಟಿ ನೀಡಿದಾಗ
2) ರೂ. 75,000/– ಗಳನ್ನು **On Completion of First Five Chapters**
3) ರೂ. 75,000/– ಗಳನ್ನು **On Completion of 2nd Five Chapters**
4) ರೂ. 1,00,000/– ಗಳನ್ನು **Balance amount will be payable after getting NABH certificate.**

ಕಾರಣ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಮೆ॥ **Bussiness Services India** ಇವರಿಂದ ಎನ್.ಎ.ಬಿ.ಹೆಚ್‌ನ ಕೋ– ಆರ್ಡಿನೇಟರ್ ಸೇವೆಯನ್ನು ಪಡೆಯುವ ಬಗ್ಗೆ ಹಾಗೂ ಈ ವೆಚ್ಚವನ್ನು ಓಪೆಕ್ ಆಸ್ಪತ್ರೆಯ ಖಾತೆ ಸಂಖ್ಯೆ 62248955822 ರಿಂದ ಪಾವತಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಅವಶ್ಯವಿರುವ ನ್.ಎ.ಬಿ.ಹೆಚ್‌ನ ಕೋ– ಆರ್ಡಿನೇಟರ್ ಸೇವೆಯನ್ನು ಕೆ.ಟಿ.ಪಿ.ಪಿ ಕಾಯ್ದೆಯನ್ವಯ ನಿಯಮಾನುಸಾರ ಪಡೆಯಲು ಕ್ರಮ ವಹಿಸುವಂತೆ ಅನುಮತಿ ನೀಡಲಾಯಿತು. ಈ ವೆಚ್ಚವನ್ನು ಓಪೆಕ್ ಆಸ್ಪತ್ರೆಯ ಲೆಕ್ಕಶೀರ್ಷಿಕೆ 2210–01–110–2–37 ಅಡಿಯಲ್ಲಿ ಭರಿಸಲು ಆರ್ಥಿಕ ಸಮಿತಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| ವಿಷಯ ಸೂಚಿ ಸಂಖ್ಯೆ – 19 | ರಿಮ್ಸ್ ಸಂಸ್ಥೆಯಲ್ಲಿ ನೀರಿನ ಅಭಾವವಿರುವರುವುದರಿಂದ 05 ಬೋರ್‌ವೆಲ್ ಕೊರೆಸಲು ಅನುಮತಿ ನೀಡುವ ಕುರಿತು |
|---|---|

ರಿಮ್ಸ್ ವೈದ್ಯಕೀಯ ಕಾಲೇಜು ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಗೆ ಕೃಷ್ಣ ನದಿಯಿಂದ ರಾಯಚೂರು ನಗರಕ್ಕೆ ಹಾದು ಹೋಗಿರುವ ರೈಸಿಂಗ್ ಪೈಪ್‌ಲೈನಿಂದ ನೀರನ್ನು ಸರಬರಾಜು ಮಾಡಲಾಗುತ್ತಿದ್ದರಿಂದ ಈವರೆಗೆ ವೈದ್ಯಕೀಯ ಕಾಲೇಜು ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಯ ಆವರಣಕ್ಕೆ ಯಾವುದೇ ನೀರಿನ ತೊಂದರೆ ಇರಲಿಲ್ಲ. ಆದರೆ ಪ್ರಸ್ತುತ ಕೃಷ್ಣ ನದಿಯಿಂದ ರಾಯಚೂರು ನಗರಕ್ಕೆ 24 x 7 ಸೂಪರ್ ಸ್ಪೀಡ್ ಪೈಪ್‌ಲೈನನ್ನು ಹೊಸದಾಗಿ ಅಳವಡಿಸಿದ ನಂತರ ಹಳೆಯ ರೈಸಿಂಗ್ ಪೈಪ್‌ಲೈನ್‌ನಲ್ಲಿ ಒಂದು ದಿನ ಬಿಟ್ಟು ಒಂದು ದಿನ ನೀರು ಪೂರೈಕೆಯಾಗುತ್ತಿರುವುದರಿಂದ, ಆಸ್ಪತ್ರೆಯಲ್ಲಿ ನೀರಿಲ್ಲದೇ ತುಂಬಾ ತೊಂದರೆ ಉಂಟಾಗಿರುತ್ತದೆ.

ಪ್ರತಿಷ್ಠತಿ ರಿಮ್ಸ್ ಸಂಸ್ಥೆಯಲ್ಲಿ ಸುಮಾರು 650 ವೈದ್ಯ ವಿದ್ಯಾರ್ಥಿಗಳು, 200 ಅರೆ ವೈದ್ಯಕೀಯ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಅಲ್ಲದೇ 200 ಬೋಧಕ ಹಾಗೂ 400 ಹೆಚ್ಚು ಬೋಧಕೇತರ ಸಿಬ್ಬಂದಿಗಳು ರಿಮ್ಸ್ ವೈದ್ಯಕೀಯ ಕಾಲೇಜು ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಗೆ ಪ್ರತಿ ನಿತ್ಯ ಸುಮಾರು 10 ಲಕ್ಷ ಲೀಟರ್ ನೀರಿನ ಅವಶ್ಯಕತೆಯಿರುತ್ತದೆ.

(ಡಾ.ಕವಿತಾ ಪಾಟೀಲ್),
ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಜಾವೇದ್ ಅಖ್ತರ್), ಭಾ.ಆ.ಸೇ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ,
ಬೆಂಗಳೂರು

ಕೆಲವೊಂದು ವೇಳೆ ನಗರಸಭೆಯಿಂದ ಪೂರೈಕೆಯಾಗುವ ನೀರಿನಲ್ಲಿ ವ್ಯತ್ಯಯ ಉಂಟಾಗುತ್ತಿದ್ದು, ಇಂತಹ ವೇಳೆಯಲ್ಲಿ ವಿದ್ಯಾರ್ಥಿಗಳ ವಸತಿ ನಿಲಯಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವಸತಿ ಸಮುಚ್ಚಯಗಳಿಗೆ ಟ್ಯಾಂಕರ್ ಮುಖಾಂತರ ನೀರನ್ನು ಹಾಕಿಸಲಾಗುತ್ತಿದೆ. ಅದರೂ ಬೇಸಿಗೆ ಮತ್ತು ಕೆಲವೊಂದು ವೇಳೆ ಟ್ಯಾಂಕರ್‌ಗಳು ಸಹ ನಿಗದಿತ ಸಮಯದಲ್ಲಿ ನೀರನ್ನು ಪೂರೈಕೆ ಮಾಡುವುದಿಲ್ಲ. ಈ ಹಿನ್ನಲೆಯಲ್ಲಿ ಸಂಸ್ಥೆಯ ಆವರಣದಲ್ಲಿ 05 ಬೋರ್‌ವೆಲ್‌ಗಳನ್ನು ಕೊರೆಯಿಸಿದಲ್ಲಿ ತಾತ್ಕಾಲಿಕವಾಗಿ ನೀರಿನ ಅಭಾವವನ್ನು ನೀಗಿಸಬಹುದಾಗಿರುತ್ತದೆ.

ಕಾರಣ ರಿಮ್ಸ್ ಸಂಸ್ಥೆಯ ಆವರಣದಲ್ಲಿ ನೀರಿನ ಅಭಾವವನ್ನು ಸರಿದೂಗಿಸಲು 05 ಬೋರ್‌ವೆಲ್‌ಗಳನ್ನು ಕೊರೆಯಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ಸಂಸ್ಥೆ, ರಿಮ್ಸ್ ಭೋದಕ ಆಸ್ಪತ್ರೆ, ವಸತಿ ನಿಲಯಗಳು, ಸಿಬ್ಬಂದಿ ವಸತಿ ಸಮುಚ್ಚಯಗಳ ಆವರಣದಲ್ಲಿ ನೀರಿನ ಅಭಾವವನ್ನು ಸರಿದೂಗಿಸಲು ಆವರಣದಲ್ಲಿ ನೀರಿನ ಲಭ್ಯತೆಯ ಇದೆಯೋ ಅಥವಾ ಇಲ್ಲವೋ ಎಂಬುದರ ಕುರಿತು ಖಚಿತ ಮಾಹಿತಿ ಪಡೆದ ನಂತರ ನಿಯಮಾನುಸಾರ 05 ಬೋರ್‌ವೆಲ್‌ಗಳನ್ನು ಕೊರೆಯಿಸಲು ಆರ್ಥಿಕ ಸಮಿತಿ ಸಭೆಯು ಪರಿಶೀಲಿಸಿ ಅನುಮೋದನೆ ನೀಡಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ – 20 | ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿರುವ ಅನುಪಯುಕ್ತ ವಾಹನಗಳನ್ನು ನಿಯಮಾನುಸಾರ ವಿಲೇವಾರಿ ಮಾಡಲು ಅನುಮತಿ ನೀಡುವ ಬಗ್ಗೆ. |

ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿರುವ ವಾಹನ ಸಂಖ್ಯೆ ಕೆಎ–36 / ಜಿ / 82 ಮತ್ತು ಕೆಎ – 36 / ಜಿ / 23 ವಾಹನಗಳು ಅನುಪಯುಕ್ತವಾಗಿದ್ದು, ಸದರಿ ವಾಹನಗಳನ್ನು ದುರಸ್ಥಿಗೊಳಿಸಲು ಭಾರಿ ವ್ಯಯದಿಂದ ಕೂಡಿದ್ದು, ದುರಸ್ಥಿಗೊಳಿಸಿದರು ಸಹ ಪದೇ ಪದೇ ದುರಸ್ಥಿಗೆ ಬರುವ ಸಾಧ್ಯತೆಗಳು ಹೆಚ್ಚಾಗಿದ್ದು, ರಸ್ತೆ ಸುರಕ್ಷತಾ ಹಿತದೃಷ್ಟಿಯಿಂದ ಸದರಿ ವಾಹನಗಳನ್ನು ನಿರುಪಯುಕ್ತಗೊಳಿಸುವುದು ಸೂಕ್ತವೆಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ರಾಯಚೂರು ಇವರು ಸೂಚಿಸಿರುತ್ತಾರೆ.

ಕಾರಣ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿರುವ ವಾಹನ ಸಂಖ್ಯೆ ಕೆಎ–36 / ಜಿ / 82 ಮತ್ತು ಕೆಎ – 36 / ಜಿ / 23 ವಾಹನಗಳು ಅನುಪಯುಕ್ತವಾಗಿದ್ದು, ಸದರಿ ವಾಹನಗಳನ್ನು ನಿಯಮಾನುಸಾರ ವಿಲೇವಾರಿ ಮಾಡಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿರುವ ಅನುಪಯುಕ್ತ ವಾಹನ ಸಂಖ್ಯೆ ಕೆಎ–36 / ಜಿ / 82 ಮತ್ತು ಕೆಎ – 36 / ಜಿ / 23 ಗಳನ್ನು ನಿಯಮಾನುಸಾರ ವಿಲೇವಾರಿ ಮಾಡಲು ಆರ್ಥಿಕ ಸಮಿತಿ ಸಭೆಯು ಪರಿಶೀಲಿಸಿ ಅನುಮೋದನೆ ನೀಡಲಾಯಿತು.

(ಡಾ.ಕವಿತಾ ಪಾಟೀಲ್),
ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಜಾವೇದ್ ಅಖ್ತರ್), ಭಾ.ಆ.ಸೇ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ,
ಬೆಂಗಳೂರು

| ವಿಷಯ ಸೂಚಿ ಸಂಖ್ಯೆ – 21 | ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿನ ದ್ರವ್ಯ ಆಮ್ಲಜನಕ ಘಟಕದ ನವೀಕರಣದ ಕುರಿತು |
|---|---|

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ 6.00 ಕೆ.ಎಲ್. ಸಾಮರ್ಥ್ಯದ ದ್ರವ್ಯ ಆಮ್ಲಜನಕ ಘಟಕವನ್ನು ದಿನಾಂಕ ರಂದು ಪ್ರಾರಂಭಿಸಲಾಗಿರುತ್ತದೆ. ಸದರಿ ಘಟಕದಿಂದ ನಿರಂತರವಾಗಿ ಐ.ಸಿ.ಯು ಗಳಿಗೆ, ಓ.ಟಿಗಳಿಗೆ ಮತ್ತು ವಾರ್ಡ ಗಳಿಗೆ ಎಲ್ಲ ಚಿಕಿತ್ಸಾ ಕೊಠಡಿಗಳಿಗೆ ನಿರಂತರವಾಗಿ ಆಮ್ಲಜನಕವನ್ನು ಪೂರೈಸಲಾಗುತ್ತಿದೆ. ಸದರಿ ಘಟಕವನ್ನು ಪ್ರ್ಯಾಕ್ಷೆಯರ್ ಕಂಪನಿಯರ ಜೊತೆ ದಿನಾಂಕ 18.02.2014 ರಿಂದ 5 ವರ್ಷಗಳ ವರೆಗೆ ಒಡಂಬಡಿಕೆ ಮಾಡಿಕೊಂಡು ಘಟಕವನ್ನು ನಿರ್ವಹಣೆ ಮಾಡಲಾಗುತ್ತಿದೆ. ಸದರಿ ಕಂಪನಿವಯರ ಜೊತೆಗಿನ ಒಡಂಬಡಿಕೆಯು ದಿನಾಂಕ 17.02.2019 ರಂದು ಮುಕ್ತಾಯಗೊಳ್ಳುತ್ತಿದೆ. ಸದರಿ ಕಾರ್ಯವನ್ನು ನವೀಕರಣಗೊಳಿಸಲು ಓಫೆಕ್ ಆಸ್ಪತ್ರೆಯ ಖಾತೆಯಲ್ಲಿ ಅನುದಾನ ಲಭ್ಯವಿರುತ್ತದೆ.

ಕಾರಣ, ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿನ ದ್ರವ್ಯ ಆಮ್ಲಜನಕ ಘಟಕದ ನವೀಕರಣವನ್ನು ಮುಂದಿನ 5 ವರ್ಷಗಳವರೆಗೆ ಮೆ॥ ಪ್ರಾಕ್ಸೈರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಇವರಿಂದ ಒಪ್ಪಂದ ಮಾಡಿಕೊಳ್ಳುವ ಬಗ್ಗೆ ಹಾಗೂ ಈ ವೆಚ್ಚವನ್ನು ಓಪಕ್ ಆಸ್ಪತ್ರೆಗೆ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿನ ದ್ರವ್ಯ ಆಮ್ಲಜನಕ ಘಟಕದ ನವೀಕರಣವನ್ನು ಮುಂದಿನ 5 ವರ್ಷಗಳವರೆಗೆ ಮೆ॥ ಪ್ರಾಕ್ಸೈರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಇವರಿಂದ ಒಪ್ಪಂದ ಮಾಡಿಕೊಳ್ಳಲು ಆರ್ಥಿಕ ಸಮಿತಿ ಸಭೆಯು ಅನುಮತಿ ನೀಡಲಾಯಿತು. ಹಾಗೂ ಈ ವೆಚ್ಚವನ್ನು ಓಪಕ್ ಆಸ್ಪತ್ರೆಗೆ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದಿಂದ ಭರಿಸಲು ಆರ್ಥಿಕ ಸಮಿತಿ ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

| ವಿಷಯ ಸೂಚಿ ಸಂಖ್ಯೆ – 22 | ರಿಮ್ಸ್ ಸಂಸ್ಥೆಯ 2012–13, 2013–14, 2014–15, 2015–16, 2016–17 ಮತ್ತು 2017–18 ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಚಾರ್ಟೆಡ್ ಅಕೌಂಟೆಂಟ್ ಇವರಿಂದ ಮಾಡಿಸಲಾದ ಲೆಕ್ಕಪರಿಶೋಧನಾ ವರದಿಯನ್ನು ಅಂಗೀಕರಿಸುವ ಕುರಿತು. |
|---|---|

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 2012–13, 2013–14, 2014–15, 2015–16, 2016–17 ಮತ್ತು 2017–18ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಚಾರ್ಟೆಡ್ ಅಕೌಂಟೆಂಟ್ ಇವರು ಲೆಕ್ಕಪರಿಶೋಧನೆಯನ್ನು ಮಾಡಿ ಲೆಕ್ಕಪತ್ರ ವಿವರವನ್ನು ಈ ಕಾರ್ಯಾಲಯಕ್ಕೆ ಸಲ್ಲಿಸಿದ್ದು, ವರ್ಷವಾರು ಸಮಸ್ಥೆಯ ಲೆಕ್ಕಪರಿಶೋಧನಾ ವರದಿಯನ್ನು ಆರ್ಥಿಕ ಸಮಿತಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :–

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 2012–13, 2013–14, 2014–15, 2015–16, 2016–17 ಮತ್ತು 2017–18ನೇ ಸಾಲಿನ ಚಾರ್ಟೆಡ್ ಅಕೌಂಟೆಂಟ್ ಇವರಿಂದ ಮಾಡಿಸಲಾದ ಲೆಕ್ಕಪರಿಶೋಧನಾ ವರದಿಯನ್ನು ಪರಿಶೀಲಿಸಿ ಅನುಮೋದಿಸಲಾಯಿತು.

| ವಿಷಯ ಸೂಚಿ ಸಂಖ್ಯೆ – 23 | ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಷಯಗಳು |
|---|---|

ಅಧ್ಯಕ್ಷರ ಅಪ್ಪಣೆ ಮೇರೆಗೆ ಯಾವುದೇ ವಿಷಯಗಳು ಚರ್ಚೆಗೆ ಬಾರದೇ ಇರುವುದರಿಂದ ಆರ್ಥಿಕ ಸಮಿತಿ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

(ಡಾ.ಕವಿತಾ ಪಾಟೀಲ್),
ನಿರ್ದೇಶಕರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

(ಜಾವೇದ್ ಅಖ್ತರ್), ಭಾ.ಆ.ಸೇ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ,
ಬೆಂಗಳೂರು